ಬೆಲೆ ರೂ.2.50
D.O.P - 15th of every month at Udupi Sorting Office

Smt. Nagaveni Ullas
Proprietor
Mobile : 9741626190
E-mail : rao.ullas@yahoo.co.in

KEYA

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.
Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ


ಮಾಸಪತ್ರಿಕೆ - 15 ಮಾರ್ಚ್ 2015


॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-15 ಸಂಚಿಕೆ-3 ಪುಟಗಳು-8 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

# ಶೃಂಗೇರಿ ಜಗದ್ಗುರುಗಳು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮನ





**ದಕ್ಷಿಣಾಮ್ನಾಯ ಶ್ರೀ ಕ್ಷೇತ್ರ ಶೃಂಗೇರಿಯ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರು ತಮ್ಮ ಶಿಷ್ಯ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಯವರೊಂದಿಗೆ ಎಪ್ರಿಲ್ 11ರಿಂದ 14ರವರೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ಜಗದ್ಗುರುಗಳು ತಮ್ಮ ಶಿಷ್ಯ ಸ್ವೀಕಾರದ ನಂತರ ಮೊದಲ ಬಾರಿಗೆ ದಕ್ಷಿಣ ಕನ್ನಡ ಜಿಲ್ಲೆಗೆ ತಮ್ಮ ಶಿಷ್ಯ ಸಮೇತವಾಗಿ ಆಗಮಿಸುತ್ತಿರುವುದು ನಮಗೆಲ್ಲರಿಗೂ ಸಂತೋಷದ ವಿಚಾರ.**

### ಬೆಳಿಗ್ಗೆ ಆಗಮನ

ಎಪ್ರಿಲ್ 11ರಂದು ಬೆಳಿಗ್ಗೆ 10 ಗಂಟೆಗೆ ಉಭಯ ಶ್ರೀಗಳು ತಮ್ಮ ಪರಿವಾರದೊಂದಿಗೆ ಮಂಗಳೂರು ಕೋಟೆಕಾರಿನ ಶ್ರೀ ಶಂಕರ ಮಠಕ್ಕೆ ಆಗಮಿಸುವರು. ಅಲ್ಲಿ ಪೂರ್ಣ ಕುಂಭ ಸ್ವಾಗತದೊಂದಿಗೆ ಶ್ರೀಗಳವರನ್ನು ಎದುರುಗೊಂಡು, ಬರಮಾಡಿಕೊಂಡಾಗ ಶ್ರೀಗಳವರು ಶ್ರೀ ಶಾರದಾಂಬಾ, ಶ್ರೀ ಗಣಪತಿ, ಮತ್ತು ಶ್ರೀ ಶಂಕರಾಚಾರ್ಯ ಮಂದಿರಕ್ಕೆ ಭೇಟಿ ನೀಡುವರು. ನಂತರ ಶ್ರೀ ಶ್ರೀಗಳವರ ಧೂಳೀ ಪಾದ ಪೂಜೆ ನೆರವೇರುತ್ತದೆ.

### ಸಮಷ್ಠಿ ಭಿಕ್ಷೆ-ಹೊರೆ ಕಾಣಿಕೆ

ನಂತರ ವಿವಿಧ ಸಂಘ ಸಂಸ್ಥೆಗಳಿಂದ, ಬೇರೆ ಬೇರೆ ಶಿಷ್ಯ ವರ್ಗಗಳಿಂದ ಪಾದ ಪೂಜೆ ನೆರವೇರುತ್ತದೆ. ಅಲ್ಲದೆ ಸಮಸ್ತ ಸ್ಥಾನಿಕ ಬ್ರಾಹ್ಮಣ ಸಮಾಜದ ವತಿಯಿಂದ ಸಮಷ್ಠಿ ಭಿಕ್ಷೆ ನಡೆಯಲಿದೆ. ಇದೇ ಸಂದರ್ಭದಲ್ಲಿ ವಿವಿಧ ಸಂಘಟನೆಗಳು ಮತ್ತು ಶ್ರೀ ಕ್ಷೇತ್ರ ಶೃಂಗೇರಿಯ ಶಾರದಾ ಪೀಠದ ಶಿಷ್ಯವರ್ಗದವರಿಂದ ಆಕರ್ಷಕ ಮೆರವಣಿಗೆ ಮೂಲಕ ತಂದ ಸುವಸ್ತುಗಳ ಹೊರೆ ಕಾಣಿಕೆಯನ್ನು ಜಗದ್ಗುರುಗಳಿಗೆ ಸಮರ್ಪಿಸಲಾಗುವುದು. ಶ್ರೀ ಮಠದಲ್ಲಿ ಮಧ್ಯಾಹ್ನ ಮಹಾಪೂಜೆಯ ನಂತರ ಆಗಮಿಸಿದ ಎಲ್ಲರಿಗೆ ಅನ್ನ ಸಂತರ್ಪಣೆ ನೆರವೇರಲಿದೆ.

### ಉಭಯ ಶ್ರೀಗಳಿಗೆ ಅಭಿವಂದನಾ ಕಾರ್ಯಕ್ರಮ

ಮಧ್ಯಾಹ್ನ 3.30ಕ್ಕೆ ಎಲ್ಲ ಶಿಷ್ಯ ವರ್ಗ ಮತ್ತು ಸಾರ್ವಜನಿಕರು ಸಭಾಂಗಣದಲ್ಲಿ ಸೇರುವುದು. ಕರ್ನಾಟಕ ಸರಕಾರದ ಮಾನ್ಯ ಮಂತ್ರಿಗಳು, ಶಾಸಕರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿ ವರ್ಗದವರು ಸೇರಿದ ಈ ಸಭೆಗೆ ಉಭಯ ಶ್ರೀಗಳವರು ಆಗಮಿಸಿ ಉಪಸ್ಥಿತರಿರುವರು. ಹಿರಿಯ ಶ್ರೀಗಳ ಪಟ್ಟಾಭಿಷೇಕದ ರಜತ ವರ್ಷಾಚರಣೆಯ ಶುಭ ಸಂದರ್ಭದಲ್ಲಿ ಮತ್ತು ನೂತನ ಕಿರಿಯ ಯತಿಗಳ ಪ್ರಥಮ ಜಿಲ್ಲಾ ದರ್ಶನದ ಈ ಸಮಯದಲ್ಲಿ ಉಭಯ ಶ್ರೀಗಳನ್ನೂ ಫಲ ಪುಷ್ಪ, ವಸ್ತ್ರ, ಹಾಗೂ ಅಭಿನಂದನಾ ಪತ್ರಗಳನ್ನು ಸಮರ್ಪಿಸಿ ಗೌರವಿಸಲಾಗುವುದು. ನಂತರ ಜಿಲ್ಲೆಯ ಇತರ ಸಂಘ ಸಂಸ್ಥೆಗಳಿಂದ ಮತ್ತು ಶಿಷ್ಯ ವರ್ಗಗಳಿಂದ ಗೌರವಾರ್ಪಣೆ ಸ್ವೀಕರಿಸಿದ ಗುರುಗಳು ಸಭೆಯನ್ನುದ್ದೇಶಿಸಿ ಆಶೀರ್ವಚನ ನೀಡುವರು.

### ಸಂಜೆ ಮಂಗಳೂರಿಗೆ

ಸಂಜೆ 6.30ರ ಹೊತ್ತಿಗೆ ಉಭಯ ಶ್ರೀಗಳೂ ತಮ್ಮ ಪರಿವಾರದೊಂದಿಗೆ ಮಂಗಳೂರಿಗೆ ನಿರ್ಗಮಿಸುವರು. ಹಿಂದೆ ಶೃಂಗೇರಿ ಶ್ರೀ ಶಾರದಾ ಪೀಠದಿಂದಲೇ ಪ್ರತಿಷ್ಠಾಪಿಸಲ್ಪಟ್ಟ ಮಂಗಳೂರಿನ ಶ್ರೀ ರಾಧಾಕೃಷ್ಣ ದೇವಸ್ಥಾನದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿರುವರು.ರಾತ್ರಿ ಅಲ್ಲಿಯೇ ಮೊಕ್ಕಾಂ ಇದ್ದು, ಮರುದಿನ ಅಲ್ಲಿಯೇ ಭಿಕ್ಷೆ ಸ್ವೀಕರಿಸಿ ಮಧ್ಯಾಹ್ನದ ನಂತರ ಅಶ್ವತ್ಥಪುರಕ್ಕೆ ನಿರ್ಗಮಿಸುವರು.

### ಅಶ್ವತ್ಥಪುರದಲ್ಲಿ

ಮೂಡಬಿದ್ರೆಯ ಸಮೀಪವಿರುವ ಅಶ್ವತ್ಥಪುರ ಶ್ರೀರಾಮ ದೇವಸ್ಥಾನವು ಶ್ರೀ ಕ್ಷೇತ್ರ ಶೃಂಗೇರಿಯ ಶಿಷ್ಯವರ್ಗವಾದ ದೇಶಸ್ಥ ಬ್ರಾಹ್ಮಣ ಒಕ್ಕೂಟದಿಂದ ಆರಾಧಿಸಲ್ಪಡುತ್ತಿದೆ.

(5ನೇ ಪುಟಕ್ಕೆ...)

### ಸಮಾಜ ಬಾಂಧವರಿಂದ ಶ್ರೀಗಳ ಭೇಟಿ


**ಶ್ರೀ ಕ್ಷೇತ್ರ ಶೃಂಗೇರಿಯ ಜಗದ್ಗುರುಗಳು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆಂದು ತಿಳಿದ ಉಡುಪಿ, ಮಂಗಳೂರು ಮತ್ತು ಪಡುಬಿದ್ರೆಯ ಸ್ಥಾನಿಕ ಬ್ರಾಹ್ಮಣ ಸಂಘಟನೆಗಳ ಪದಾಧಿಕಾರಿಗಳು ಜೊತೆಯಾಗಿ ದಿನಾಂಕ 03-03-2015ರಂದು ಶ್ರೀ ಕ್ಷೇತ್ರ ಶೃಂಗೇರಿಗೆ ತೆರಳಿ ಜಗದ್ಗುರುಗಳನ್ನು ಭೇಟಿಯಾಗಿ ಜಿಲ್ಲೆಗೆ ಆಗಮಿಸುವಾಗ ನಮ್ಮಲ್ಲಿಗೂ ಬಂದು ಮೊಕ್ಕಾಂ ಇದ್ದು, ಆಶೀರ್ವಚನ ನೀಡಬೇಕೆಂದು ವಿನಂತಿಸಿಕೊಂಡರು. ಆದರೆ "ಪೂರ್ವ ನಿರ್ಧರಿತ ಕಾರ್ಯಕ್ರಮದಂತೆ ಸಮಯದ ಕೊರತೆ ಇರುವುದರಿಂದ ಈಗ ದಕ್ಷಿಣ ಕನ್ನಡದ ಕೋಟೆಕಾರಿಗೆ ಎಲ್ಲರೂ ಬಂದು ಮಂತ್ರಾಕ್ಷತೆಯನ್ನು ಪಡೆಯಿರಿ" ಎಂದು ಅಪ್ಪಣೆ ನೀಡಿದರು.**

### ಸಮಿತಿಗಳ ರಚನೆ

ಜಗದ್ಗುರುಗಳ ಜಿಲ್ಲಾ ಆಗಮನದ ಬಗ್ಗೆ ತಿಳಿದುಕೊಂಡು ದಿನಾಂಕ 18-01-2015 ರಂದು ಸಾರ್ವಜನಿಕ ಅಭಿನಂದನಾ ಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಸತ್ಯಶಂಕರ ಬೊಳ್ಳಾವರು ಸಂಚಾಲಕ ರಾಗಿಯೂ, ಮಾಜಿ ಶಾಸಕರಾದ ಶ್ರೀ ಜಯರಾಮ ಶೆಟ್ಟಿಯವರು ಗೌರವಾಧ್ಯಕ್ಷ ರಾಗಿಯೂ, ದಾಮೋದರ ನಿಸರ್ಗರವರು ಅಧ್ಯಕ್ಷರಾಗಿಯೂ ಸತೀಶ್ ಕುಂಪಲ ಕಾರ್ಯಾಧ್ಯಕ್ಷರಾಗಿಯೂ, ಎನ್.ಎಸ್. ಗೋಖಲೆ, ಎನ್ ಕೆ ಜಗನ್ನಿವಾಸರಾವ್, ಕೆ.ಶಂಕರನಾರಾಯಣ ಭಟ್, ಬಿ.ಕೃಷ್ಣಮೂರ್ತಿ ರಾವ್ ಉಡುಪಿ, ಸಾಯಿನಾಥ ಮಲ್ಲಿಗೆಮಾಡು, ಪಿಲಾರ್ ಹರಿಶ್ಚಂದ್ರಗಟ್ಟಿ, ಉಳ್ಳಾಲ ಸದಾನಂದ ಬಂಗೇರ, ಕೆ ಮಹಾಬಲ ಶೆಟ್ಟಿ, ಚಂದ್ರಹಾಸ ಉಳ್ಳಾಲ್, ಡಿ ಬಿ ಬಾಲಕೃಷ್ಣ, ಡಾ|ಮಾಧವಿ, ಸಿ ಎಸ್ ರಾವ್, ಎಚ್ ವಿ ರಾಮ್‌ಜಿ ಹೆಗಡೆ ಉಪಾಧ್ಯಕ್ಷರಾಗಿಯೂ, ಎಸ್. ಶರತ್‌ಚಂದ್ರ ಗಟ್ಟಿ ಕೋಶಾಧಿಕಾರಿಗಳಾಗಿಯೂ, ನಾರಾಯಣಶೆಟ್ಟಿಯವರು ಪ್ರಧಾನ ಕಾರ್ಯದರ್ಶಿಗಳಾಗಿಯೂ, ಕೆಮ್ಮಣ್ಣು ಸತೀಶ್‌ಕುಮಾರ್, ಅಶೋಕ್‌ಬಾಡಿ, ಸರೋಜಾಭಟ್, ಗುಣವತಿ ಆಚಾರ್ಯ ಕಾರ್ಯದರ್ಶಿಗಳಾಗಿಯೂ, ಚಂದ್ರಶೇಖರ್ ಉಚ್ಚಿಲ್, ಹರಿಕೃಷ್ಣ ಪುನರೂರು, ಮಾಧವ ಗೌಡ ಸುಳ್ಯ ಗೌರವ ಸಲಹೆಗಾರರಾಗಿಯೂ ಇತರರನ್ನು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿಯೂ ಆರಿಸಲಾಯಿತು.

ಅಲ್ಲದೆ ದಿನಾಂಕ 07-03-2015ರಂದು ಕೋಟೆಕಾರಿನ ಶ್ರೀ ಶಂಕರ ಮಠದ ಆಶ್ರಯದಲ್ಲಿ ಶ್ರೀ ಶಂಕರ ಪ್ರತಿಷ್ಠಾನದ ಗುರುವಂದನಾ ಸಮಿತಿಯನ್ನೂ ರಚಿಸಲಾಗಿದೆ. ಶ್ರೀ ಸತ್ಯಶಂಕರ ಬೊಳ್ಳಾವರು ಸಂಚಾಲಕರಾಗಿರುವ ಈ ಸಮಿತಿಯಲ್ಲಿ ಬೆಂಗಳೂರಿನ ಎ, ಶಿವರಾವ್ ಗೌರವಾಧ್ಯಕ್ಷ ರಾಗಿಯೂ, ಎಮ್.ಆರ್. ವಾಸುದೇವ್ ಅಧ್ಯಕ್ಷರಾಗಿಯೂ, ಎಚ್ ಪ್ರಭಾಕರ ರಾವ್,ಕೆಡೆಂಜಿ ಭಾಸ್ಕರರಾವ್ ಮತ್ತು ಎಲ್ಲಾ ಸ್ಥಾನಿಕ ಬ್ರಾಹ್ಮಣ ಸಂಘಟನೆಗಳ ಅಧ್ಯಕ್ಷರುಗಳನ್ನು ಉಪಾಧ್ಯಕ್ಷರನ್ನಾಗಿಯೂ, ಅರುಣ್‌ಕುಮಾರ್ ಜಡೆಮನೆ,ಕೊಯ್ಲ ಲಕ್ಷ್ಮೀನಾರಾಯಣರಾವ್, ಚಿತ್ರಾಪುರ ರಾಘವೇಂದ್ರರಾವ್ ಪ್ರಧಾನ ಕಾರ್ಯದರ್ಶಿ ಗಳಾಗಿಯೂ, ಜಗದೀಶರಾವ್ ಮೂಡಬಿದ್ರೆ, ಟಿ ಪಿ ಮುರಳೀಧರರಾವ್, ಎ ಕೃಷ್ಣ ಶರ್ಮ, ಡಾ| ಮೇಘಶ್ಯಾಮರಾವ್ ಜೊತೆ ಕಾರ್ಯದರ್ಶಿಗಳಾಗಿಯೂ, ಬೊಕ್ಕಸ ಚಂದ್ರಶೇಖರರಾಯರು ಕೋಶಾಧಿಕಾರಿ ಗಳಾಗಿಯೂ ಉಳಿದಂತೆ ಆಗಮಿಸಿದ ಎಲ್ಲ ಸಮಾಜ ಬಾಂಧವರನ್ನು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ಆರಿಸಲಾಯಿತು.

ಈ ಸಮಿತಿಗಳು ಜೊತೆಯಾಗಿ ಕಾರ್ಯನಿರ್ವಹಿಸುತ್ತಾ ಕಾರ್ಯಕ್ರಮ ಗಳನ್ನು ಹೇಗೆ ಸಂಘಟಿಸಬೇಕೆಂದು ಯೋಜನೆ ಮಾಡಲಾಯಿತು. ಅದರಂತೆ ವ್ಯವಸ್ಥೆಗಳ ಏರ್ಪಾಡು ನಡೆಯುತ್ತಿದೆ. ತಾ.11-04-2015ರಂದು ಕೋಟೆಕಾರಿನ ಶ್ರೀ ಶಂಕರ ಮಠದಲ್ಲಿ ನೆರವೇರಲಿರುವ ಜಗದ್ಗುರುಗಳವರ ಈ ಅಭಿವಂದನಾ ಕಾರ್ಯಕ್ರಮದಲ್ಲಿ ಉಡುಪಿ ಹಾಗೂ ದಕ್ಷಿಣ ಕನ್ನಡದ ಜಿಲ್ಲೆಗಳ ಸಮಸ್ತ ಸ್ಥಾನಿಕ ಬಂಧುಗಳೂ ಕೋಟೆಕಾರಿಗೆ ಆಗಮಿಸಿ ಉಭಯ ಶ್ರೀಗಳಿಂದ ಆಶೀರ್ವಚನ ಹಾಗೂ ಮಂತ್ರಾಕ್ಷತೆಯನ್ನು ಸ್ವೀಕರಿಸಬೇಕೆಂದು ಸಮಿತಿಯು ವಿನಂತಿಸಿಕೊಂಡಿದೆ.



## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

**ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ - 2.**

ನಮ್ಮ ಸಂಘದ ಆಶ್ರಯದಲ್ಲಿ

## ಶ್ರೀ ಶಂಕರ ಜಯಂತಿ ಆಚರಣೆಯು

ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ
ತಾ.23-04-2015 ಗುರುವಾರ ನೆರವೇರಲಿದೆ.

ಆ ಪ್ರಯುಕ್ತ ಅದೇ ದಿನ ಬೆಳಿಗ್ಗೆ **ಸಾಮೂಹಿಕ ಉಪನಯನ**ವು ನಡೆಯಲಿದೆ.

ಸರ್ವರಿಗೂ ಆದರದ ಸ್ವಾಗತ : - ಕಾರ್ಯದರ್ಶಿ

**ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.10-04-2014ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್/ಕಾರ್ಯದರ್ಶಿಯವರಿಗೆ ತಿಳಿಸಲು ವಿನಂತಿಸಲಾಗಿದೆ.**

ಸಂಪಾದಕೀಯ ಲೇಖನ....

# ರಾಜ್ಯ ಸರಕಾರದ ಜಾತಿಗಣತಿ ಯೋಜನೆಯ ಮಾಹಿತಿ

## ಸಮಾಜ ಬಾಂಧವರಲ್ಲಿ ವಿನಂತಿ

ದೇಶಾದ್ಯಂತ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳ ದಾಖಲಾತಿ, ಹಾಗೂ ಸರಕಾರಿ ಹುದ್ದೆಗಳ ಭರ್ತಿಬಾಬ್ತು 'ಮೀಸಲಾತಿ' ಯನ್ನು ನೀಡುವ ನಿರ್ಧಾರಕ್ಕಾಗಿ ಸರ್ವೋಚ್ಚ ನ್ಯಾಯಾಲಯವು ವಿಚಾರಿಸುತ್ತಾ, ಜಾತಿಗಳು ಯಾವುದು? ಅವುಗಳಿಗೆ ನೀಡುವ ಮೀಸಲಾತಿಯ ಸಂಖ್ಯೆ ನಿಗದಿಗೆ ಯಾವ ಆಧಾರದಲ್ಲಿ ನಿರ್ಧರಿಸಲಾಗಿದೆ? ಎಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡನ್ನೂ ಪ್ರಶ್ನಿಸಿದೆ. ನ್ಯಾಯಾಲಯ ಕೇಳಿದ ಈ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಲು ಮೇಲಿನ ಎರಡೂ ಸರಕಾರಗಳಿಗೆ ಸಾಧ್ಯವಾಗಿಲ್ಲ. ಏಕೆಂದರೆ ಈ ಲೆಕ್ಕಾಚಾರದ ನಿರ್ಣಯವಿರುವುದು 1931ರ ಜಾತಿ ಗಣತಿಯ ಆಧಾರ. ನಂತರ ನಮ್ಮ ಸರಕಾರದ ವತಿಯಿಂದ ಜಾತಿ ಗಣತಿಯೇ ನಡೆದಿರುವುದಿಲ್ಲ. ಆದ್ದರಿಂದ ಈ ಮೀಸಲಾತಿ ಕ್ರಮವನ್ನು ವೈಜ್ಞಾನಿಕವೆಂದು ಸರ್ವೋಚ್ಚನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ನಮ್ಮ ಸರಕಾರಗಳಿಗೆ ಸಾಧ್ಯವಾಗಿಲ್ಲ. ಅದಕ್ಕಾಗಿ ಕರ್ನಾಟಕ ಸರಕಾರವು ಅತ್ಯಂತ ವೈಜ್ಞಾನಿಕವಾಗಿ ದೇಶದಲ್ಲಿಯೇ ಪ್ರಥಮ ಬಾರಿಗೆ ಜಾತಿಗಣತಿ ಮಾಡಬೇಕೆಂದು ತೀರ್ಮಾನಿಸಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮೂಲಕ ಆದೇಶ ಹೊರಡಿಸಿದೆ.

ಸಮಾಜದಲ್ಲಿ "ಸರ್ವರಿಗೂ ಸಮಪಾಲು;ಸಮ ಬಾಳು" ತತ್ವದ ಮೇಲೆ ಸಮಾನತೆ ಸಾಧಿಸಲು, ಜನಪರ ಯೋಜನೆಗಳನ್ನು ರೂಪಿಸಲು ಮತ್ತು ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಸಾಧಿಸಲು ಈ ಜಾತಿವಾರು ಗಣತಿಯ ಸಮೀಕ್ಷೆ ಅವಶ್ಯಕವಾಗಿದೆ. ವಿವಿಧ ಜಾತಿಗಳ ಸಮಾಜಿಕ, ಶೈಕ್ಷಣಿಕ, ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿ, ವಿಶ್ಲೇಷಿಸಿ, ಈಗಿರುವ ಹಿಂದುಳಿದ ವರ್ಗಗಳ ಪಟ್ಟಿಯನ್ನು ಪರಿಷ್ಕರಿಸುವ ಮಹತ್ವದ ಕಾರ್ಯವನ್ನು ಕೈಗೊಂಡು ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸರಕಾರಕ್ಕೆ ಶಿಫಾರಸ್ಸು ಮಾಡುವ ಜವಾಬ್ದಾರಿ ಹೊಂದಿದೆ.

### 2015 ಎಪ್ರಿಲ್ ತಿಂಗಳಲ್ಲಿ ಜಾತಿ ಸಮೀಕ್ಷೆ

2015 ಎಪ್ರಿಲ್ ತಿಂಗಳ 11ನೇ ತಾರೀಕಿನಿಂದ 30ರ ತನಕ ಈ ಜಾತಿವಾರು ಸಮೀಕ್ಷೆ ನಡೆಸಲು ಗಣತಿದಾರರು ಮನೆ ಮನೆಗೆ ಭೇಟಿ ನೀಡುತ್ತಾರೆ. ಈ ಸಮಯದಲ್ಲಿ ಸಮಾಜದ ಪ್ರತಿಯೊಂದು ಮನೆಯವರೂ ಈ ಗಣತಿದಾರರಿಗೆ ತಮ್ಮ ಕುಟುಂದ ಸಮಗ್ರ ಮಾಹಿತಿ ಹಾಗೂ ಪ್ರತಿ ಸದಸ್ಯರ ವೈಯಕ್ತಿಕ ವಿವರಗಳನ್ನು ಅತ್ಯಂತ ನಿಖರವಾಗಿ ಮತ್ತು ಸತ್ಯಾಂಶಗಳೊಂದಿಗೆ ತಿಳಿಸುವುದು ಅವಶ್ಯಕ. ಗಣತಿದಾರರಲ್ಲಿ ಸಮೀಕ್ಷಾ ಮಾಹಿತಿ ಸಂಗ್ರಹಿಸಲು ಇರುವ ಅನುಸೂಚಿ ನಮೂನೆ-3ರಲ್ಲಿ 1ರಿಂದ 55 ಕಾಲಂಗಳಿದ್ದು,(1-39ರಲ್ಲಿ ಮನೆಯ ಪ್ರತಿಯೊಬ್ಬ ಸದಸ್ಯರ ವೈಯಕ್ತಿಕ ಮಾಹಿತಿ ಸಂಗ್ರಹ ಹಾಗೂ 40 ರಿಂದ 55ರ ವರೆಗೆ ಕುಟುಂಬಕ್ಕೆ ಸಂಬಂಧಿಸಿದ ಒಟ್ಟಾರೆ ಮಾಹಿತಿಯನ್ನು ದಾಖಲಿಸುವುದು) ಅವೆಲ್ಲವೂ ಪ್ರತಿ ಮನೆಯಲ್ಲಿ ಗಣತಿದಾರರಿಂದ ಭರ್ತಿ ಮಾಡಲ್ಪಡುತ್ತದೆ.

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ವೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಸ್ಥಾನಿಕ ಬಂಧುಗಳೇ-ನೀವು ನೀಡುವ ಮಾಹಿತಿ ಸ್ಪಷ್ಟವಾಗಿ ಹೀಗಿರಬೇಕು.

**ಕುಟುಂಬದ ಅನುಸೂಚಿ ನಮೂನೆ -3ರ ಕಾಲಂ ಸಂಖ್ಯೆ 6-ಜಾತಿ(Cast), ಕಾಲಂಸಂಖ್ಯೆ 7-ಉಪಜಾತಿ(Sub Cast ), ಕಾಲಂ ಸಂಖ್ಯೆ 8 ಜಾತಿಗೆ ಇರುವ ಇನ್ನಿತರ ಪರ್ಯಾಯ ಹೆಸರುಗಳು(ಗರಿಷ್ಠ-3) (Other synonymous names by which the Cast is known) (Max -3) ಎಂದು ಇದೆ. ಈ ಕಾಲಂಗಳಲ್ಲಿ - 6ರಲ್ಲಿ "ಸ್ಥಾನಿಕ ಬ್ರಾಹ್ಮಣ" ಎಂದೂ, 7ರಲ್ಲಿ / X (ನಮೂದು ಇಲ್ಲ ಎಂದು ಅರ್ಥ)ಎಂದೂ, 8ರಲ್ಲಿ "ಸ್ಥಾನಿಕ" ಎಂದೂ ನಮೂದಿಸಬೇಕು.**

**ನಮ್ಮ ಸ್ಥಾನಿಕ ಬ್ರಾಹ್ಮಣ ಸಮಾಜದ ಮುಂದಿನ ಜನಾಂಗದ ಉಳಿಕೆಗೆ, ಒಳಿತಿಗೆ, ಪ್ರಗತಿಗೆ ಹೀಗೆ ನಮೂದಿಸುವುದು ಅತ್ಯಗತ್ಯವೆಂದು ನಿರ್ಧರಿಸಲಾಗಿದೆ. ಈ ಬಗ್ಗೆ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಪದಾಧಿಕಾರಿಗಳು, ನಮ್ಮ ಸ್ಥಾನಿಕ ಸಮಾಜದ ವಿವಿಧ ಸಂಘಟನೆಗಳ ಮುಖಂಡರು ಮತ್ತು ಗಣ್ಯರಲ್ಲಿ ಚರ್ಚಿಸಿ ಈ ರೀತಿಯ ತೀರ್ಮಾನಕ್ಕೆ ಬರಲಾಗಿದೆ.(ಬೇರೆ ಇತರ ಅಭಿಪ್ರಾಯಗಳಿದ್ದರೂ ಸಮಾಜ ಬಾಂಧವರು ತಿಳಿಸಬಹುದು.) ಆದ್ದರಿಂದ ಈ ಮಾಹಿತಿಯನ್ನು ಸ್ಥಾನಿಕ ಬ್ರಾಹ್ಮಣ ಸಮಾಜದ ಪ್ರತಿಯೊಬ್ಬರೂ ತಿಳಿದುಕೊಂಡು ಈ 6-7-8 ಕಾಲಂ ಗಳಲ್ಲಿ ಈ ಕೆಳಗಿನಂತೆ ನಮೂದಿಸುವುದು.**

| ಕಾಲಂ ಸಂಖ್ಯೆ 6 | ಕಾಲಂ ಸಂಖ್ಯೆ 7 | ಕಾಲಂ ಸಂಖ್ಯೆ 7 | | |
|---|---|---|---|---|
| A 1177 | X | A 1176 | X | X |

**(ಈ ಸಂಕೇತಗಳನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಕೈಗೊಳ್ಳಲಾಗುವ "ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015" ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಗುರುತಿಸಿರುವ ಜಾತಿ-ಉಪಜಾತಿಗಳ ಪಟ್ಟಿಯಲ್ಲಿ ಪ್ರಕಟಿಸಿದಂತೆ ಬರೆಯಬೇಕಾಗಿದೆ. (ಎಲ್ಲಾ ಜಾತಿಗಳಿಗೂ ಒಂದೊಂದು ಸಂಕೇತ ನೀಡಲಾಗಿದೆ.) (ಸ್ಥಾನಿಕ-A 1176 ಮತ್ತು ಸ್ಥಾನಿಕ ಬ್ರಾಹ್ಮಣ-A 1177 ಸಂಕೇತ ನೀಡಿರುತ್ತಾರೆ.**

**ಗಣತಿದಾರರು ನಿಮ್ಮ ಮನೆಗೆ ಬಂದಾಗ ಶ್ರೀ ಶಾರದಾ ಪತ್ರಿಕೆಯಲ್ಲಿರುವ ಈ ಸಂಕೇತಗಳನ್ನೇ ಗಣತಿದಾರರಿಗೆ ತೋರಿಸುವಂತೆ ವಿನಂತಿಸಿಕೊಳ್ಳಲಾಗಿದೆ.**

**- ಸಂಪಾದಕ ಮಂಡಳಿ**

# ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ



ಮೈಸೂರಿನಲ್ಲಿ ವಾಸ್ಥವ್ಯದಲ್ಲಿರುವ ಶ್ರೀ ಪ್ರವೀಣ್ ಬೆಳ್ಳೆಯವರು ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ಸಹಕರಿಸಿದ್ದಾರೆ. ಮೂಲತಃ ಉಡುಪಿ ತಾಲೂಕು ಪಡುಬೆಳ್ಳೆಯವರಾದ ಶ್ರೀ ಪ್ರವೀಣ್ ಬೆಳ್ಳೆ ಪಡುಬೆಳ್ಳೆ ದಿ ಅನಂತರಾಮರಾವ್(ದಿ।ಅಪ್ಪಣ್ಣ ಯಾನೆ ಲಕ್ಷ್ಮೀನಾರಾಯಣ ಶ್ಯಾನುಬೋಗ್‌ರ ಸಹೋದರ) ಮತ್ತು ಶಾಂತಾ ರಾವ್ ಬೆಳ್ಳೆ ದಂಪತಿಗಳ ಮೂವರು ಪುತ್ರರಲ್ಲಿ ಇವರು ದ್ವಿತೀಯ ಪುತ್ರ. 1955ರಲ್ಲಿ ಹೆಜಮಾಡಿಯಲ್ಲಿ ಜನಿಸಿದ ಶ್ರೀಯುತರು ಅಲ್ಲಿಯೇ ತನ್ನ ಪ್ರಾಥಮಿಕ, ಪ್ರೌಢ ವಿದ್ಯಾಭ್ಯಾಸವನ್ನು ಪೂರೈಸಿ, ಮೂಲ್ಕಿಯ ವಿಜಯಾ ಕಾಲೇಜಿನಲ್ಲಿ ಪಿ ಯು ತರಗತಿಯನ್ನು ಓದಿದರು. ನಂತರ ದಾವಣಗೆರೆಯ ಸರಕಾರಿ ಬಿ ಡಿ ಟಿ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕಾನಿಕಲ್ ಇಂಜಿನಿಯರ್ ಪದವಿ ಪಡೆದರು. ಅಲ್ಲದೆ ಮುಂಬೈಯಲ್ಲಿ ಮತ್ತೆ ಮೆರಿನ್ ಇಂಜಿನಿಯರಿಂಗ್ ಪದವಿಯನ್ನು ಓದಿ,ತನ್ನ ಪರಿಶ್ರಮಕ್ಕೆ ತಕ್ಕಂತೆ ಮುಂಬೈಯಲ್ಲಿ ಮುಖ್ಯ ಕಛೇರಿ ಹೊಂದಿರುವ ಶಿಪ್ಪಿಂಗ್ ಕಾರ್ಪೋರೇಶನ್ ಆಫ್ ಇಂಡಿಯಾದಲ್ಲಿ ಉದ್ಯೋಗಕ್ಕೆ ಸೇರ್ಪಡೆಗೊಂಡರು. ಸಂಸ್ಥೆಯಲ್ಲಿ ಉದ್ಯೋಗ ನಿಮಿತ್ತ ಪ್ರಪಂಚದಾದ್ಯಂತ ಸುತ್ತುತ್ತಿದ್ದರೂ ತನ್ನ ರಜಾ ಕಾಲದಲ್ಲಿ ಸಾಮಾಜಿಕವಾಗಿ ಊರಿನ ಎಲ್ಲರೊಂದಿಗೆ ವ್ಯಹರಿಸುತ್ತಾ ಸಮಾಜದ ಎಲ್ಲರ ಪರಿಚಯ ಮಾಡಿಕೊಳ್ಳುವುದು ಇವರ ಹವ್ಯಾಸ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ- ಪ್ರಕೃತ ಮೈಸೂರು ಮೈನ್ ಶಾಖೆಯ ಉದ್ಯೋಗಿಯಾಗಿರುವ ಪುತ್ತೂರಿನ ಶ್ರೀಮತಿ ಪ್ರಫುಲ್ಲ ಬೆಳ್ಳೆ ಶ್ರೀ ಪ್ರವೀಣ್ ಬೆಳ್ಳೆಯವರ ಧರ್ಮಪತ್ನಿ. ಈ ದಂಪತಿಗಳಿಗೆ ಇಬ್ಬರು ಪುತ್ರಿಯರು. ಹಿರಿಯ ಪುತ್ರಿ ಶ್ರೀಮತಿ ಡಾ।ಶರ್ವಾಣಿ (ಫಿಜಿಯೋತೆರಫಿಸ್ಟ್) ಕಟಪಾಡಿ ಮೂಡಬೆಟ್ಟು ಡಾ। ಅವಿನಾಶ್‌ರವರ ಪತ್ನಿ. ಕಿರಿಯ ಪುತ್ರಿ ಕು। ಅಂಕಿತಾ ಕೊನೆಯ ವರ್ಷದ ಇಂಜಿನಿಯರಿಂಗ್(ಇ & ಸಿ) ಓದುತ್ತಿದ್ದಾರೆ.

ಶ್ರೀ ಪ್ರವೀಣ್ ಬೆಳ್ಳೆಯವರ ಈ ಕೊಡುಗೆಯನ್ನು ಸಂಘವು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಿ ಅವರಿಗೆ ಹಾಗೂ ಅವರ ಮನೆಯವರಿಗೆ ಶ್ರೇಯಸ್ಸಾಗಲಿ ಎಂದು ಶ್ರೀ ಶಾರದಾ ಮಾತೆಯಲ್ಲಿ ಪ್ರಾರ್ಥಿಸುತ್ತದೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎಸ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಲುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ವೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ.

## ಶಿವರಾತ್ರಿಯ ಪರ್ವ ದಿನದಂದು ನಾಸಿಕದಲ್ಲಿ ಮಿಂಚಿದ

# ಗೋಕುಲ ಕಲಾವೃಂದ ಮಹಿಳಾ ಯಕ್ಷಗಾನ




ದಿನಾಂಕ 17.2.2015 ರಂದು ಗೋಕುಲ ಕಲಾವೃಂದ, ಬಿ.ಎಸ್.ಕೆ.ಬಿ. ಅಸೋಸಿಯೇಶನ್, ಸಾಯನ್, ಮುಂಬಯಿಯ ಮಹಿಳಾ ಕಲಾವಿದೆಯರು, ನಾಸಿಕ್ ಕನ್ನಡ ಸಂಘ, ಶಿವರಾತ್ರಿಯ ಪರ್ವದಿನದ ಪ್ರಯುಕ್ತ ಆಯೋಜಿಸಿದ ವಿವಿಧ’ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಗೋಕುಲ ಕಲಾವೃಂದದ ಅಧ್ಯಕ್ಷೆ ಹಾಗೂ ಯಕ್ಷಗಾನ ಕಲಾವಿದೆ ಶ್ರೀಮತಿ ಗೀತಾ ಎಲ್ ಭಟ್‌ರವರ ನಿರ್ದೇಶನದಲ್ಲಿ ‘ದಕ್ಷಾಧ್ವರ’ ಎಂಬ ಯಕ್ಷಗಾನವನ್ನು ಸಾದರ ಪಡಿಸಿದರು. ಶ್ರೀ ಸ್ವಾಮೀ ಸಮರ್ಥ ಮಂಗಳ ಕಾರ್ಯಾಲಯದ ವೇದಿಕೆಯಲ್ಲಿ ಆಯೋಜಿಸಿದ ಕಾರ್ಯಕ್ರಮವನ್ನು ನಾಸಿಕ್ ಕನ್ನಡ ಸಂಘದ ಕಾರ್ಯದರ್ಶಿಯವರಾದ ಶ್ರೀ ಪಿ.ಸತೀಶ್ ಕುಮಾರ್ ದಂಪತಿಗಳು ಪ್ರಾಯೋಜಿಸಿದ್ದರು. ಅಪರಾಹ್ನ ಮೂರು ಗಂಟೆಯಿಂದ ನಡೆದ ವಿವಿಧ ಭಜನಾ ಮಂಡಳಿಗಳಿಂದ ಶಿವ ನಾಮ ಕೀರ್ತನೆ, ಭಜನಾ ಕಾರ್ಯಕ್ರಮದಲ್ಲಿ ಗೋಕುಲ ಭಜನಾ ಮಂಡಳಿ ಕೂಡಾ ಪಾಲ್ಗೊಂಡಿತು.

ಸುಮಾರು 3 ಗಂಟೆಗಳ ಕಾಲ ನಡೆದ ಯಕ್ಷಗಾನದಲ್ಲಿ ದೇವೇಂದ್ರನಾಗಿ ಶೈಲಿನಿ ರಾವ್, ಅಗ್ನಿಯಾಗಿ ಕುಮಾರಿ ತನ್ವಿ ರಾವ್, ವಾಯು–ಕುಮಾರಿ ನವ್ಯ ರಾವ್, ಹಾಗೂ ವರುಣನಾಗಿ–ಕುಮಾರ ಶ್ರೀ ಕೃಷ್ಣ, ದಕ್ಷನ ಪಾತ್ರದಲ್ಲಿ–ಗೀತಾ ಎಲ್ ಭಟ್, ದಕ್ಷನ ಮಡದಿ–ವಾಣಿ ಭಟ್, ಈಶ್ವರ–ಶಾಂತಿಲಕ್ಷ್ಮಿ ಉಡುಪ, ದಾಕ್ಷಾಯಿಣಿ–ಸಹನಾ ಭಾರದ್ವಾಜ್, ಬೃಹಸ್ಪತಿ–ಅನುರಾಧಾ ರಾವ್, ಬ್ರಾಹ್ಮಣರು–ಅಂಜನಾ ರಾವ್, ಶಾಂತಲಾ ಉಡುಪ, ಕುಮಾರಿಯರಾದ ಜಾಹ್ನವಿ ಮತ್ತು ಭಾರ್ಗವಿ ಪೋತಿ, ಶಿವಗಣ–ಸಹನಾ ಪೋತಿ ಮತ್ತು ಅಂಜನಾ ರಾವ್, ನಾರದ–ಪ್ರೇಮಾ ಎಸ್. ರಾವ್, ವೀರಭದ್ರ–ಕುಮಾರಿ ಮೇಘನಾ ಆಚಾರ್ಯ ಪಾತ್ರವಹಿಸಿದ್ದರು. ಈ ಮಹಿಳಾ ಯಕ್ಷಗಾನವು ನೆರೆದ ಪ್ರೇಕ್ಷಕರ ಪ್ರಚಂಡ ಕರತಾಡನದ ಮೆಚ್ಚುಗೆಯನ್ನು ಪಡೆಯಿತು.

ಪ್ರಾಯೋಜಕರಾದ ಶ್ರೀ ಸತೀಶ್ ಕುಮಾರ್ ದಂಪತಿಗಳು ಮತ್ತು ಸಂಘದ ಅಧ್ಯಕ್ಷರಾದ ಪಿ.ಬಿ.ಗುರಡ್ಡಿಯವರು ಬಿ.ಎಸ್.ಕೆ.ಬಿ. ಸಂಸ್ಥೆಯ ಕಾರ್ಯದರ್ಶಿ ಶ್ರೀ ಪಿ.ಸಿ.ಎನ್.ರಾವ್ ಮತ್ತು ಎಲ್ಲಾ ಕಲಾವಿದೆಯರಿಗೆ ಸ್ಮರಣಿಕೆಗಳನ್ನಿತ್ತು ಅಭಿನಂದಿಸಿದರು. ಗೋಕುಲದ ಸದಸ್ಯೆ, ಈಗ ನಾಸಿಕದಲ್ಲಿ ನೆಲೆಸಿರುವ ಖ್ಯಾತ ಮುದ್ರಾ ವಿಜ್ಞಾನ ತಜ್ಞೆ ಶ್ರೀಮತಿ ಸುಮನ್ ಚಿಪ್ಲುಣ್ಕರ್ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ, ಎಲ್ಲಾ ಕಲಾವಿದೆಯರಿಗೆ ಬಹುಮಾನ ವಿತರಿಸಿ ಆಶೀರ್ವದಿಸಿದರು. ಶ್ರೀಮತಿ ಸುಮೇಧ ರಾವ್ ಕಾರ್ಯಕ್ರಮವನ್ನು ನಿರೂಪಿಸಿದರು. ಕಲಾವೃಂದದ ಪರವಾಗಿ ಸಂಚಾಲಕಿ ಶ್ರೀಮತಿ ಪ್ರೇಮಾ ಎಸ್.ರಾವ್ ಪ್ರಾಯೋಜಕರಿಗೆ, ಕನ್ನಡ ಸಂಘದ ಪದಾಧಿಕಾರಿಗಳಿಗೆ ಹಾಗೂ ಸಹಕರಿಸಿದ ಎಲ್ಲರಿಗೂ ಧನ್ಯವಾದ ಸಮರ್ಪಣೆ ಗೈದರು. ನಾಸಿಕದ ಪೇಜಾವರ ಮಠದ ಅರ್ಚಕರಿಂದ ಶ್ರೀ ದೇವರಿಗೆ ಮಂಗಳಾರತಿಯಾದ ನಂತರ ಪ್ರಸಾದ ವಿತರಣೆ ನೆರವೇರಿತು.

ಭಾಗವತರಾಗಿ ಕಂಚಿನ ಕಂಠದ ಶ್ರೀ ವಾಸುದೇವ ಭಟ್, ಏರ್ಮಾಳು, ಮದ್ದಳೆ –ಶ್ರೀ ಮಧುಸೂದನ್ ಪಾಲನ್ ಹಾಗೂ ಚೆಂಡೆ ವಾದಕರಾಗಿ ಶ್ರೀ ಚಂದ್ರಶೇಖರ ಭಟ್, ಕೊಂಕಣಾಜೆ ಸಹಕರಿಸಿದರು. ಶ್ರೀ ಗೀತಾಂಬಿಕಾ ಯಕ್ಷಗಾನ ಮಂಡಳಿ, ಅಸಲ್ಫಾ, ಘಾಟ್ಕೋಪರ್ ವೇಷಭೂಷಣಗಳಲ್ಲಿ ಸಹಕರಿಸಿದರು.

## ಕಡಬದಲ್ಲಿ ಮೂಡ್ಯಪ್ಪ ಸೇವೆ ಹಾಗೂ ಕುಂಭಾಟ್ ಗೋಪಾಲ್‌ರಾಯರ ಸನ್ಮಾನ

ಕಡಬದ ಶ್ರೀ ಶ್ರೀ ಕಂಠಸ್ವಾಮಿ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ದಿನಾಂಕ 02–02–2015ರಂದು ವಿಶೇಷ ರಂಗಪೂಜೆ ಸಹಿತ ‘ಮೂಡ್ಯಪ್ಪ ಸೇವೆ’ಯನ್ನು ನಡೆಸಲಾಯಿತು. ಮರುದಿನ ವಾರ್ಷಿಕ ಜಾತ್ರೆಯು ನೆರವೇರಿತು. ಈ ಸಂದರ್ಭದಲ್ಲಿ ಮೂಡ್ಯಪ್ಪ ಸೇವಾ ಸಮಿತಿ ಹಾಗೂ ಜಾತ್ರಾ ಸಮಿತಿಯು ದೇವಳದ ಆಡಳಿತ ಮುಕ್ತೇಸರರಾದ ಶ್ರೀ ಕುಂಭಾಟ್ ಗೋಪಾಲರಾಯರನ್ನು ಸನ್ಮಾನಿಸಿದರು. ಕಡಬದಲ್ಲಿರುವ ಈ ದೇವಾಲಯಕ್ಕೆ ಸುಮಾರು 1200ವರ್ಷಗಳ ಹಿಂದೆ ಶ್ರೀ ಶ್ರೀ ಶಂಕರ ಭಗವತ್ಪಾದರು ಆಗಮಿಸಿ ಕೆಲಕಾಲ ಶ್ರೀ ಶ್ರೀಕಂಠಸ್ವಾಮಿಯನ್ನು ಆರಾಧಿಸಿದ್ದರೆಂದು "ಶ್ರೀ ಶಂಕರ ವಿಜಯ" ಗ್ರಂಥದಿಂದ ತಿಳಿದು ಬರುತ್ತದೆ. ಅವರ ಆಗಮನದ ಸವಿನೆನಪಿಗಾಗಿ ಶ್ರೀ ಶ್ರೀ ಶಂಕರಚಾರ್ಯರ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ಎ ಗೋಪಾಲರಾಯರು ಅಪೇಕ್ಷಿಸಿದ್ದು, ಶ್ರೀ ಕ್ಷೇತ್ರ ಶೃಂಗೇರಿಯ ಜಗದ್ಗುರುಗಳನ್ನು ಸಂಪರ್ಕಿಸಿದ್ದು, ಅದಕ್ಕಾಗಿ ಅಮೃತಶಿಲೆಯ ಭವ್ಯ ಮೂರ್ತಿಯನ್ನು ಒದಗಿಸುವುದಾಗಿ ತಿಳಿಸಿದ್ದಾರೆ. ಸಾಧ್ಯವಾದಷ್ಟು ಬೇಗನೆ ಈ ಮೂರ್ತಿಯ ಪ್ರತಿಷ್ಠಾಪನಾ ಕಾರ್ಯ ನಡೆಯಬೇಕೆಂದು ದೇವಾಲಯ ಸಮಿತಿಯು ಅಪೇಕ್ಷಿಸಿದೆ.


–ಶ್ರೀಮತಿ ಪ್ರಮೀಳಾ ಸನತ್‌ಕುಮಾರ್

### ತತ್ತ್ವಜ್ಞಾನಿಗಳ ದಿನಾಚರಣೆ

## ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಗೆ ಆಹ್ವಾನ

**ಕುಂದಾಪುರದ ಕುಂದೇಶ್ವರ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ‘ತತ್ತ್ವಜ್ಞಾನಿಗಳ ದಿನಾಚರಣೆ’ಯ ಅಂಗವಾಗಿ ಸಾರ್ವಜನಿಕ ನೆಲೆಯಲ್ಲಿ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ. ಆಸಕ್ತರು ‘ಸನಾತನ ಧರ್ಮದ ಸಂರಕ್ಷಣೆಯಲ್ಲಿ ಆದಿಶಂಕರರ ಪಾತ್ರ’ ಕುರಿತು ಕನ್ನಡ, ಇಂಗ್ಲಿಷ್ ಅಥವಾ ಸಂಸ್ಕೃತದಲ್ಲಿ 10 ಪುಟಗಳಿಗೆ ಮೀರದಂತೆ ಪ್ರಬಂಧವೊಂದನ್ನು ಬರೆದು ಏಪ್ರಿಲ್ 5ರ ಒಳಗೆ ‘ವ್ಯವಸ್ಥಾಪಕರು, ಶ್ರೀ ಕುಂದೇಶ್ವರ ದೇವಸ್ಥಾನ, ಕುಂದಾಪುರ–576201; ಉಡುಪಿ ಜಿಲ್ಲೆ’ ಇವರಿಗೆ ಕಳುಹಬೇಕು. ಸ್ಪರ್ಧಾ ವಿಜೇತರಾದ ಮೂರು ಮಂದಿಗೆ ಏಪ್ರಿಲ್ 23ರಂದು ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ನಡೆಯುವ ಶ್ರೀ ಶಂಕರ ಜಯಂತಿಯ ಧಾರ್ಮಿಕ ಸಭೆಯಲ್ಲಿ ಅನುಕ್ರಮವಾಗಿ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.**

## ‘‘ಚಂದ್ರಶಾಪ’’ ಕವನಸಂಕಲನ ಬಿಡುಗಡೆ



ಉಡುಪಿಯ ಎಸ್.ಎಮ್.ಎಸ್.ಪಿ. ಸಂಸ್ಕೃತ ಮಹಾವಿದ್ಯಾಲಯದಲ್ಲಿ ನಡೆದ ಸರಳ ಸಮಾರಂಭದಲ್ಲಿ ನಿವೃತ್ತ ಪ್ರಾಧ್ಯಾಪಕರೂ, ನಮ್ಮ ಸಮಾಜದ ಹಿರಿಯರೂ ಆದ ಶ್ರೀ ಮ.ನಾ.ಹೆಬ್ಬಾರ್ ಅವರ ಕವನ ಸಂಕಲ ‘‘ಚಂದ್ರಶಾಪ’’ವನ್ನು ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರಾದ ಡಾ। ಎಚ್.ಕೆ. ಸುರೇಶ್ ಆಚಾರ್ಯರವರು ದಿನಾಂಕ 14–02–2015 ರಂದು ಬಿಡುಗಡೆ ಮಾಡಿದರು. ವೇದಿಕೆಯಲ್ಲಿ ಜ್ಯೋತಿಷ್ಯ ಪ್ರಾಧ್ಯಾಪಕರಾದ ಶ್ರೀ ಹರಿದಾಸ್ ಭಟ್ ಉಪಸ್ಥಿತರಿದ್ದರು. 40 ಕವನಗಳನ್ನು ಒಳಗೊಂಡ ಈ ಕವನ ಸಂಕಲದ ಬಿಡುಗಡೆಯ ಸಮಾರಂಭದಲ್ಲಿ ಕೃತಿಯ ಕರ್ತೃ ಶ್ರೀ ಮ.ನಾ.ಹೆಬ್ಬಾರ್‌ರನ್ನು ಶಾಲು, ಹಾರದೊಂದಿಗೆ ಸನ್ಮಾನಿಸಲಾಯಿತು.

## ವೈವಾಹಿಕ ಜೀವನದ ಸುವರ್ಣ ಸಂಭ್ರಮ

ಉಪ್ಪಿನಂಗಡಿ ಹಿರೇಬಂಡಾಡಿ ಗ್ರಾಮದ ಪಾದಳದಲ್ಲಿ ವಾಸ್ತವ್ಯವಿರುವ ಕ್ಯೊಲ ಶ್ರೀ ಶ್ರೀಧರರಾವ್ ಮತ್ತು ಶ್ರೀಮತಿ ಸುಭದ್ರಾ ಶ್ರೀಧರರಾವ್ ದಂಪತಿಗಳು ತಮ್ಮ ವೈವಾಹಿಕ ಜೀವನದ ಐದು ದಶಕಗಳ ಸಂಭ್ರಮವನ್ನು ದಿನಾಂಕ 07–03–2015ರಂದು ಮಕ್ಕಳಾದ ಶ್ರೀ ಹರಿಕಿರಣ್, ರವಿಕಿರಣ್, ಸಂಧ್ಯಾರಾಣಿ, ಉಷಾರಾಣಿ ಮತ್ತು ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧುಬಾಂಧವರನ್ನೊಗೂಡಿಕೊಂಡು ಆಚರಿಸಿದರು. ಕೋಲ್ಪೆ ಗೋಪಾಲಕೃಷ್ಣ ರಾಯರು ಉಪಸ್ಥಿತರಿದ್ದು ದಂಪತಿಗಳಿಗೆ ಶುಭಕೋರಿದರು.

**–ಜಿ.ಕೆ.ಕೋಲ್ಪೆ , ಉಡುಪಿ**

## ಕಾಂತ ಮಂಗಲದಲ್ಲಿ ಪ್ರತಿಷ್ಠಾ ದಿನೋತ್ಸವ

ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಕಾಂತಮಂಗಲ ಇಲ್ಲಿ ಶ್ರೀ ದೇವರ ಪ್ರತಿಷ್ಠಾ ದಿನೋತ್ಸವವು ದಿನಾಂಕ 18–02–2015ರಂದು ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವವದಲ್ಲಿ ಭಕ್ತ ಬಾಂಧವರ ಸಹಕಾರದೊಂದಿಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಂಪನ್ನಗೊಂಡಿತು.

## ಹೆಜಮಾಡಿಯಲ್ಲಿ ಹರಿಕಥೆ

ಹೆಜಮಾಡಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರೆಯ ಪ್ರಯುಕ್ತ ದಿನಾಂಕ 21–02–2015ರಂದು ಹರಿದಾಸ ಮ.ನಾ.ಹೆಬ್ಬಾರ್‌ರಿಂದ ‘‘ಭಕ್ತ ಚಂದ್ರಹಾಸ’’ ಹರಿಕಥಾ ಕಾಲಕ್ಷೇಪವು ನೆರವೇರಿತು. ದೇವಸ್ಥಾನದ ವ್ಯವಸ್ಥಾಪನ ಮಂಡಳಿಯ ಶ್ರೀ ಗಣೇಶ್‌ರವರು ಹರಿದಾಸರನ್ನು ಶಾಲು, ಹಾರ ಹಾಕಿ ಸನ್ಮಾನಿಸಿ, ಬಳಿಕ ವಂದನಾರ್ಪಣೆ ಸಲ್ಲಿಸಿದರು.





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS


Krishna Rao
Ph : 2520652
Mob. : 9902029048
KISHAN

Studio & Video

Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

# ಶೃಂಗೇರಿ ಶ್ರೀ ಸದ್ವಿದ್ಯಾ ಸಂಜೀವಿನೀ ಸಂಸ್ಕೃತ ಮಹಾಪಾಠಶಾಲೆಗೆ
# ಅಮೃತ ಮಹೋತ್ಸವದ ಸಂಭ್ರಮ

- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು
ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ



(ಕಳೆದ ಸಂಚಿಕೆಯಿಂದ.....)

## ಆದರ್ಶ ಗುರುಕುಲ

ಶ್ರೀ ಮಠದ ಈ ಸಂಸ್ಕೃತ ಮಹಾಪಾಠಶಾಲೆ ಅಕ್ಷರಶಃ ಪ್ರಾಚೀನ ಭಾರತದ ಗುರುಕುಲ ಮಾದರಿಯದು. ಊಟ-ವಸತಿ-ವಸ್ತ್ರ-ವಿದ್ಯಾರ್ಥಿವೇತನ-ಪುಸ್ತಕಗಳು ಮೊದಲಾದ ಸಕಲ ಸೌಕರ್ಯಗಳೂ ಇಲ್ಲಿ ಉಚಿತ. ಬ್ರಾಹ್ಮೀಮುಹೂರ್ತದಲ್ಲಿ ಏಳುವ ಈ ವಿದ್ಯಾರ್ಥಿಗಳು ಪ್ರಾತರ್ವಿಧಿ ಪೂರೈಸಿ ಸ್ನಾನ ಮಾಡಿ, ಸಂಧ್ಯಾವಂದನೆ-ಅಗ್ನಿಕಾರ್ಯಾದಿಗಳನ್ನು ಮುಗಿಸುತ್ತಾರೆ. ಸಂಪ್ರದಾಯ ಶುದ್ಧವಾದ ಪಾಠಕ್ರಮಕ್ಕೆ ಹೆಸರಾದ ಈ ಪಾಠಶಾಲೆ ವಿದ್ಯಾರ್ಥಿಗಳ ವೈಯಕ್ತಿಕ ಧರ್ಮಾನುಷ್ಠಾನದ ಕಡೆಗೆ ವಿಶೇಷ ಗಮನ ಕೊಡುತ್ತದೆ. ಪ್ರತಿನಿತ್ಯಮುಂಜಾನೆ ಪಾಠಶಾಲೆ ಆರಂಭವಾಗುವಾಗ ಸಾಮೂಹಿಕವಾಗಿ 'ವಿದ್ಯಾಂಶುದ್ಧಾಂಚಬುದ್ಧಿಂ ಕಮಲಜದಯಿತೇ ಸತ್ವರಂ ದೇಹಿ ಮಹ್ಯಂ' ಎಂಬ ಪ್ರಾರ್ಥನಾ ಶ್ಲೋಕಗಳ ಪಠಣ, ನಂತರ ಶಾಸ್ತ್ರಸಂಪನ್ನರೂ, ಅನುಷ್ಠಾನ ನಿಷ್ಣಾತರೂ ಆದ ಅಧ್ಯಾಪಕರ ಆಗಮನ. ವೇದಕಾಲದ ವಸಿಷ್ಠ-ವಿಶ್ವಾಮಿತ್ರರನ್ನು ನೆನಪಿಗೆ ತರುವ ಈ ಹಿರಿಯ ಚೇತನಗಳಿಗೆ ವಿದ್ಯಾರ್ಥಿಗಳ ಸಾಷ್ಟಾಂಗ ಪ್ರಣಾಮ. ಅಧ್ಯಾಪಕರು ತಮ್ಮ ಆಸನದ ಮೇಲೆ ಕುಳಿತಾದ ಮೇಲೆ ಸಮವಸ್ತ್ರಧಾರಿಗಳಾದ ವಿದ್ಯಾರ್ಥಿಗಳು ಬರಿನೆಲದ ಮೇಲೆ ವೃತ್ತಾಕಾರದಲ್ಲಿ ಕುಳಿತುಕೊಳ್ಳುತ್ತಾರೆ. ಎದುರಿರುವ ವ್ಯಾಸಪೀಠದ ಮೇಲಿನ ಪುಸ್ತಕ ತೆರೆದು, ಅಂದಿನ ಪಾಠದತ್ತ ಅವಧಾನವೀಯುತ್ತಾರೆ. ಗುರುವಿನ ವಾತ್ಸಲ್ಯಪೂರ್ಣ ಸಾಮಿಪ್ಯಸುಖವನ್ನನುಭವಿಸುವ ಈ ವಿದ್ಯಾರ್ಥಿಗಳು ನಿಜವಾದ ಅರ್ಥದಲ್ಲಿ 'ಅಂತೇವಾಸಿ'ಗಳು. (ಸಂಸ್ಕೃತದಲ್ಲಿ ಗುರುವಿನ ಸಮೀಪದಲ್ಲಿ ವಾಸಿಸುವ ಶಿಷ್ಯನಿಗೆ 'ಅಂತೇವಾಸಿ ಎನ್ನುತ್ತಾರೆ.)

ಸನಾತನ ಭಾರತೀಯ ಸಂಪ್ರದಾಯದಂತೆ ನಡೆಯುವ ಈ ಪಾಠಶಾಲೆಗೆ ಭಾನುವಾರ ರಜೆ ಇಲ್ಲ. ಬದಲಿಗೆ ಹಿಂದೂ ಶಾಸ್ತ್ರಗಳು ಹೇಳುವ ಅನಧ್ಯಯನ ದಿನಗಳಲ್ಲಿ (ಪ್ರತಿಪಕ್ಷದ ತ್ರಯೋದಶಿಯಿಂದ ಬಿದಿಗೆಯವರೆಗೆ) ಮತ್ತು ಯುಗಾದಿ ಮೊದಲಾದ ಪರ್ವದಿನಗಳಲ್ಲಿ ಮಾತ್ರ ರಜೆ. ಬೆಳಗ್ಗೆ 8-30ರಿಂದ 11 ಮತ್ತು ಅಪರಾಹ್ನ 2.30ರಿಂದ 5ರವರೆಗೆ ಪಾಠ-ಪ್ರವಚನ. ಉಳಿದ ಸಮಯದಲ್ಲಿ ಸಾಮೂಹಿಕ ಅಥವಾ ವೈಯಕ್ತಿಕ ನೆಲೆಯ ಅಧ್ಯಯನ; ಆ ಪಾಠಗಳ ಕುರಿತು ಮೆಲುಕು. ತ್ರೈಮಾಸಿಕ, ಷಾಣ್ಮಾಸಿಕ ಮತ್ತು ವಾರ್ಷಿಕ ಎಂದು ವರ್ಷಕ್ಕೆ ಮೂರು ಬಾರಿ ಪರೀಕ್ಷೆ; ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ವಿದ್ಯಾರ್ಥಿವೇತನ-ಪುಸ್ತಕ ಇತ್ಯಾದಿ ನೀಡಿ ಪುರಸ್ಕಾರ. ಅನುತ್ತೀರ್ಣರಾದರೆ ಮನೆಯ ದಾರಿ ಹಿಡಿಯಬೇಕು. ಪಾಠಶಾಲೆಯಲ್ಲಿ ಅವರಿಗೆ ಅವಕಾಶವೇ ಇಲ್ಲ. ಭೋಜನದ ಆರಂಭದಲ್ಲಿ ತ್ರಿಸುಪರ್ಣ, ತೈತ್ತೀರೀಯೋಪನಿಷತ್ತುñವೊದಲಾದ ಮಂತ್ರಘೋಷ. ಭೋಜನದುದ್ದಕ್ಕೂ ಮೌನ; ಅಂತ್ಯಾಕ್ಷರೀರೂಪದಲ್ಲಿ ಒಬ್ಬರಾದ ಮೇಲೆ ಒಬ್ಬರಂತೆ ಸಂಸ್ಕೃತ ಶ್ಲೋಕಗಳ ಪಠಣ. ಪ್ರತಿ ಏಕಾದಶಿಯಂದು ಮಲ್ಲಪ್ಪನ ಬೆಟ್ಟದ ಮೇಲೆ ಇರುವ ಶ್ರೀ ಮಲಹಾನಿಕರೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ರುದ್ರಪಾರಾಯಣ; ಪ್ರತಿಪಕ್ಷ ಪ್ರದೋಷದಂದು ಶಕ್ತಿಗಳ ಪತಿಗೆ ವಿದ್ಯಾರ್ಥಿಗಳಿಂದಲೇ ಪೂಜೆ; ಅಭಿಷೇಕ, ರುದ್ರ ಪಾರಾಯಣ. ವರ್ಷಕ್ಕೊಮ್ಮೆ ಬರುವ ಮಹಾಪ್ರದೋಷದಂದು ವಿಶೇಷ ಪೂಜೆ; ಹೋಮ ಹವನಾದಿಗಳು. ಶ್ರೀ ಮಠದ ಉತ್ಸವ ಮತ್ತು ವಿಶೇಷ ಕಾರ್ಯಕ್ರಮಗಳಲ್ಲಿ ಸಕ್ರಿಯ ಸಹಭಾಗಿತ್ವ. ರಾತ್ರಿ ಮಲಗಲು ಕೇವಲ ಒಂದು ಚಾಪೆ; ಹೊದಿಯಲು ಒಂದು ಚಾದರ ಮಾತ್ರ. 'ಸುಖಾರ್ಥಿವಃ ಕುತೋವಿದ್ಯಾ, ಕುತೋ ವಿದ್ಯಾರ್ಥಿನಃ ಸುಖಮ್' (ಸುಖ ಬಯಸುವವನಿಗೆ ವಿದ್ಯೆ ಹತ್ತದು; ವಿದ್ಯಾರ್ಥಿಯ ಹತ್ತಿರ ಸುಖ ಸುಳಿಯದು) ಅಲ್ಲವೆ?.

## ಪಠ್ಯೇತರ ಚಟುವಟಿಕೆಗಳು

ಪಠ್ಯೇತರ ಚಟುವಟಿಕೆಗಳಿಗಾಗಿ ವಿದ್ಯಾರ್ಥಿ ಸಂಘ - ಪ್ರದೋಷ ಸಂಘಗಳ ರಚನೆ; ಪ್ರತಿಪಕ್ಷದ (ಒಂದು ಪಕ್ಷ=ಹದಿನೈದು ದಿನ) ಪ್ರದೋಷಗಳ ಪೂರ್ವಾಹ್ನ ಶಾಸ್ತ್ರಾಧ್ಯಯನ ಮಾಡುವ ವಿದ್ಯಾರ್ಥಿಗಳಿಗಾಗಿ ಒಂದು ಶಾಸ್ತ್ರಗೋಷ್ಠಿ. ಏಕಾದಶಿಯಂದು ಸಾಯಂಕಾಲ ವಾಗ್ವರ್ಧಿನೀಸಭಾ. ಈ ಸಭೆಯಲ್ಲಿ ತಜ್ಞರಿಂದ ಉಪನ್ಯಾಸ: ವಿದ್ಯಾರ್ಥಿಗಳಿಂದ ಸಂಸ್ಕೃತ-ಕನ್ನಡ ಭಾಷಣ; ಸಂಸ್ಕೃತ ಶ್ಲೋಕ ರಚನೆ; ಶಾಕ್ಯವಾಚನ, ವೇದಪಾಠñಇತ್ಯಾದಿ ವೈದುಷ್ಯ ಪ್ರದರ್ಶನಕ್ಕೆ ವಿಪುಲ ಅವಕಾಶ. ಭಾದ್ರಪದ ಶುಕ್ಲ ಚತುರ್ಥಿಯಿಂದ ನಡೆಯುವ ಗಣೇಶೋತ್ಸವದಲ್ಲಿ ವಿದ್ವಾಂಸರು ಮತ್ತು ವಿದ್ಯಾರ್ಥಿಗಳಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ. ಪ್ರತಿವರ್ಷ ನಡೆಸಲಾಗುವ ಶಾಲಾ ವಾರ್ಷಿಕೋತ್ಸವ ಈ ವಿದ್ಯಾರ್ಥಿಗಳ ಪಾಲಿಗೆ ದೊಡ್ಡ ಹಬ್ಬ. ಉತ್ಸವಕ್ಕೆ ಪೂರ್ವಭಾವಿಯಾಗಿ ವೇದ ಕಂಠಪಾಠ, ಅಂತ್ಯಾಕ್ಷರಿ, ಪ್ರಬಂಧ, ಭಾಷಣñವೊದಲಾದ ಸ್ಪರ್ಧೆಗಳು. ವಾರ್ಷಿಕೋತ್ಸವದ ರಾತ್ರಿ ಸಂಸ್ಕೃತ ñ ಕನ್ನಡ ನಾಟಕಗಳ ಅಭಿನಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದತ್ತಿ ಬಹುಮಾನಗಳ ವಿತರಣೆ. ಇದಲ್ಲದೆ ಪ್ರತಿವರ್ಷ ಈ ಶಾಲೆಯ ಸಂಸ್ಥಾಪಕರಾದ ಶ್ರೀನೃಸಿಂಹಭಾರತೀಗಳವರ ಜಯಂತಿ, ಪೋಷಕರಾದ ಶ್ರೀ ಚಂದ್ರಶೇಖರ ಭಾರತಿಗಳ ಮತ್ತು ಶ್ರೀ ಅಭಿನವ ವಿದ್ಯಾತೀರ್ಥರ ಜಯಂತಿ, ಈಗಿನ ಗುರುವರೇಣ್ಯರಾದ ಶ್ರೀ ಭಾರತೀತೀರ್ಥರ ವರ್ಧಂತ್ಯುತ್ಸವ, ಗೀತಾ ಜಯಂತಿ, ಗಣೇಶ ಚತುರ್ಥಿ, ಸೀತಾ ಕಲ್ಯಾಣ ñ ಇತ್ಯಾದಿ ಉತ್ಸವಗಳನ್ನು ಆಚರಿಸಲಾಗುವುದು. ವಾರ್ಷಿಕ ಪರೀಕ್ಷೆಯ ನಂತರ ವೈಶಾಖ ಮಾಸದಲ್ಲಿ ಒಂದು ತಿಂಗಳು ವಾರ್ಷಿಕ ರಜೆ; ಅದಕ್ಕೂ ಮುನ್ನ ಶರನ್ನವರಾತ್ರಿಯ ಸಮಯ 15 ದಿನಗಳ ಅರ್ಧವಾರ್ಷಿಕ ರಜೆ.

ನೂರಿಪ್ಪತ್ತು ವರ್ಷಗಳಿಂದ ಈ ಪಾಠಶಾಲೆ ನಡೆಸುತ್ತಿದ್ದರೂ ಸರಕಾರದಿಂದ ಚಿಕ್ಕಾಸಿನಷ್ಟೂ ಅನುದಾನವನ್ನು ಇದುವರೆಗೂ ಪಡೆದಿಲ್ಲ. ಯಾವುದೇ ವಿಶ್ವವಿದ್ಯಾನಿಲಯ ಅಥವಾ ಮಂಡಳಿಯ ಪಠ್ಯಕ್ರಮವನ್ನು ಅನುಸರಿಸಲಾಗುತ್ತಿಲ್ಲ. ಯಾರಾದರೂ ಪುಣ್ಯಾತ್ಮರು ಅವರಾಗಿಯೇ ದೇಣಿಗೆ ನೀಡಿದರೆ ಅದನ್ನು ನಿಧಿಯಾಗಿಟ್ಟು ಅದರ ಬಡ್ಡಿ ಹಣವನ್ನು ಪಾಠಶಾಲೆಯ ನಿರ್ವಹಣೆಗೆ ಬಳಸಲಾಗುವುದು. ಶಾಸ್ತ್ರಸಂಪನ್ನರಾದ ಹನ್ನೆರಡು ಮಂದಿ ಅಧ್ಯಾಪಕರು, ಆಡಳಿತ ನಿಪುಣರೂ ವಿದ್ವಾಂಸರೂ ಆದ ಅಧ್ಯಕ್ಷರುñಇವರು ಈ ಪಾಠಶಾಲೆಯ ಸಿಬ್ಬಂದಿವರ್ಗ. ಅಂದಿನಿಂದ ಇಂದಿನವರೆಗೆ ವಿದ್ವಾಂಸರಾದ ಬ್ರಹ್ಮಶ್ರೀ ವೈದ್ಯನಾಥ ಶಾಸ್ತ್ರಿಗಳು (1895ರಿಂದ 1902), ಜಿ.ರಾಮಸ್ವಾಮಿ ಶಾಸ್ತ್ರಿಗಳು (1902-1904), ಐನೋರು ರಾಮನಾಥ ಶಾಸ್ತ್ರಿಗಳು (1904-1907), ಕುಪ್ಪುಸ್ವಾಮಿಶಾಸ್ತ್ರಿಗಳು (1908-1913), ಐನೋರು ನರಸಿಂಹ ಮೂರ್ತಿ ಶಾಸ್ತ್ರಿಗಳು (1914-1921), ಕಲ್ಯಂ ಸುಂದರ ಶಾಸ್ತ್ರಿಗಳು (1921-1935), ನಂಜನಗೂಡು ಶಂಕರ ಶಾಸ್ತ್ರಿಗಳು (1935-1936), ವಿದ್ಯಾನಿಧೀ ವಿ.ಎಸ್. ರಾಮಚಂದ್ರ ಶಾಸ್ತ್ರಿಗಳು (1936-1937), ವೈ.ವಿಶ್ವನಾಥ ಶಾಸ್ತ್ರಿಗಳು (1937-1939), ಕೊಡೂರು ಶ್ಯಾಮಭಟ್ಟರು (1940-1946), ಕಲ್ಯ ಶೇಷ ಶಾಸ್ತ್ರಿಗಳು (1946-1948), ಕುಲಪತಿ ಶಂಕರ ನಾರಾಯಣ ಜೋಯಿಸರು (1948-1954 ಮತ್ತು 1960-1964), ಟಿ.ಕೆ ಚಂದ್ರಶೇಖರ ಭಟ್ಟರು (1954-1960), ಎಸ್.ಕೆ. ರಾಮಸ್ವಾಮಿ ಅವಧಾನಿಗಳು (1964-1983), ಹಂದೆ ರಾಮಕೃಷ್ಣ ಭಟ್ಟರು (1983-1988), ವಿನಾಯಕ ಉಡುಪರು (1988-1991) ಇವರೆಲ್ಲ ಈ ಪಾಠಶಾಲೆಯ ಅಧ್ಯಕ್ಷರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದಾರೆ. 1992ರಿಂದ 1996 ರವರೆಗೆ 'ಅಧ್ಯಕ್ಷರು' ಎಂದು ಯಾರನ್ನೂ ನಿಯಮಿಸಿರಲಿಲ್ಲ. ಬ್ರಹ್ಮಶ್ರೀ ಸಿ. ಕೃಷ್ಣಭಟ್ಟರು 'ಅಧೀಕ್ಷಕರು' ಎಂದು ನಿಯಮಿಸಲ್ಪಟ್ಟು ಈಗಲೂ ಅದೇ ಹುದ್ದೆಯಲ್ಲಿದ್ದಾರೆ. 1996ರಿಂದ ವೇ.ಬ್ರ.ಶ್ರೀ ಎಮ್.ಎ.ನಾಗರಾಜ ಭಟ್ಟರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಪ್ರತಿವರ್ಷ ನೂರರಿಂದ ನೂರೈವತ್ತರ ತನಕ ವಿದ್ಯಾರ್ಥಿಗಳು ವರ್ಷಂಪತ್ರಿ 20-30 ಮಂದಿ ಹೊಸದಾಗಿ ಸೇರುತ್ತಾರೆ. ಹೆಚ್ಚು ಕಡಿಮೆ ಅಷ್ಟೇ ಮಂದಿ ಶಿಕ್ಷಣ ಮುಗಿಸಿ ಹೊರಡುತ್ತಾರೆ. ಕರ್ನಾಟಕ (ವಿಶೇಷವಾಗಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಮಲೆನಾಡು ಪ್ರದೇಶ), ತಮಿಳುನಾಡು, ಕೇರಳ, ಆಂಧ್ರಪ್ರದೇಶಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. 1954ರಲ್ಲಿ ಭಾರತದ ಪ್ರಥಮ ರಾಷ್ಟ್ರಪತಿ ಶ್ರೀ ಬಾಬುರಾಜೇಂದ್ರ ಪ್ರಸಾದರು ಈ ಪಾಠಶಾಲೆಗೆ ಭೇಟಿ ನೀಡಿ, ಅಪಾರ ಸಂತಸ ವ್ಯಕ್ತಪಡಿಸಿ ವೈಯಕ್ತಿಕ ನೆಲೆಯಲ್ಲಿ ದೊಡ್ಡ ಮೊತ್ತದ ದೇಣಿಗೆ ನೀಡಿದ್ದರು. ನಂತರವೂ ದೇಶ-ವಿದೇಶಗಳ ನೂರಾರು ಮಂದಿ ಮೇಧಾವಿಗಳು ಈ ಪಾಠಶಾಲೆಯನ್ನು ಸಂದರ್ಶಿಸಿದ್ದಾರೆ; ಪ್ರಶಂಸೆಯ ಮಾತುಗಳನ್ನಾಡಿದ್ದಾರೆ.

## ಅಪೂರ್ವ ಗ್ರಂಥ ಭಂಡಾರ

ಈ ಮಹಾಪಾಠಶಾಲೆಯ ಸಮೀಪದಲ್ಲೇ 'ಶ್ರೀಶಂಕರ ಅದ್ವೈತಶೋಧ ಕೇಂದ್ರ' ಎಂಬ ಒಂದು ಗ್ರಂಥಾಲಯದಿಂದ ಕೂಡಿದ ಸಂಶೋಧನ ಕೇಂದ್ರವಿದೆ. ತುಂಬ ಅಪೂರ್ವವಾದ ಈ ಶೋಧ ಕೇಂದ್ರದಲ್ಲಿ ಇಪ್ಪತ್ತೈದು ಸಹಸ್ರಕ್ಕೆ ಹೆಚ್ಚು ಗ್ರಂಥಗಳಿವೆ. ಅವುಗಳಲ್ಲಿ ಕೆಲವು ತಾಳೆಗರಿಗಳು ಮತ್ತೆ ಕೆಲವು ಹಸ್ತಪ್ರತಿಗಳು. ಆಧುನೀಕ ತಂತ್ರಜ್ಞಾನವನ್ನು ಬಳಸಿಕೊಂಡು ಇದನ್ನು ತುಂಬ ಜೋಪಾನವಾಗಿ ರಕ್ಷಿಸಿಕೊಂಡು ಬರುತ್ತಿದ್ದಾರೆ. ದೇಶ-ವಿದೇಶಗಳ ಸಂಶೋಧಕರು ಆಗಾಗ ಈ ಗ್ರಂಥಭಂಡಾರಕ್ಕೆ ಭೇಟಿ ಕೊಡುವುದುಂಟು. ಸಂಶೋಧನ ವಿದ್ಯಾರ್ಥಿಗಳು ತಿಂಗಳುಗಟ್ಟಲೆ ಇಲ್ಲಿ ಕುಳಿತು ಅಧ್ಯಯನ ನಡೆಸುತ್ತಾರೆ. ಪ್ರತಿವರ್ಷ ಹೊಸ ಗ್ರಂಥಗಳ ಸೇರ್ಪಡೆ ನಡೆಯುತ್ತದೆ. ಪಾಠಶಾಲೆಯ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇದರ ಪರಿಪೂರ್ಣ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

## ಸಾಂಸ್ಕೃತಿಕ ರಾಯಭಾರಿಗಳು

ಈ ಮಹಾಪಾಠ ಶಾಲೆಯಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಜಗತ್ತಿನಾದ್ಯಂತ ವ್ಯಾಪಿಸಿದ್ದಾರೆ. ಹಾಲೆಂಡ್, ಸ್ವಿಜರ್‌ಲ್ಯಾಂಡ್, ಅಮೇರಿಕಾ ಮುಂತಾದ ದೇಶಗಳಲ್ಲಿನ ಹಿಂದೂ ಪರಧಾರ್ಮಿಕ ಸಂಸ್ಥೆಗಳು ಹಾಗೂ ದೇವಾಲಯಗಳಲ್ಲಿ ಕಾರ್ಯವೆಸಗುವ ಇವರನ್ನು ಭಾರತದ ಸಾಂಸ್ಕೃತಿಕ ರಾಯಭಾರಿಗಳಂತೆ ಕಾಣಲಾಗುತ್ತದೆ. ಅಂತರಾಷ್ಟ್ರೀಯ ರೋಟರಿ ಸಂಸ್ಥೆಯವರು ಸಮೂಹ ಅಧ್ಯಯನ ವಿನಿಮಯ ತಂಡದ (GROUP STUDY EXCHANGE TEAM) ಸದಸ್ಯನನ್ನಾಗಿ ಮಹಾಪಾಠಶಾಲೆಯ ಪ್ರಾಕ್ತನ ವಿದ್ಯಾರ್ಥಿಯಾದ ನನ್ನನ್ನು ವಿದೇಶಕ್ಕೆ ಕಳುಹಿದ ನೆನಪು ಸದಾಕಾಲ ಹಸಿರಾಗಿಯೇ ಉಳಿಯುತ್ತದೆ. ಯೋಗಶಾಸ್ತ್ರದಂತಹ ಭಾರತೀಯ ವಿದ್ಯೆಯ ಪ್ರಸಾರಕ್ಕೆ ಜಗತ್ತಿನಾದ್ಯಂತ ಸುತ್ತಾಡಿದ ಹಳೆ ವಿದ್ಯಾರ್ಥಿಗಳಿದ್ದಾರೆ. ಮೈಸೂರು, ಬೆಂಗಳೂರು, ಸಿದ್ದಗಂಗೆ, ಆದಿಚುಂಚನಗಿರಿ-ಮುಂತಾದ ಕಡೆ ಇರುವ ಸಂಸ್ಕೃತ ಕಾಲೇಜುಗಳ ಪ್ರಾಧ್ಯಾಪಕರಲ್ಲಿ ಹೆಚ್ಚಿನವರು ಈ ಮಹಾಪಾಠಶಾಲೆಯಲ್ಲಿ ಹಿಂದೆ ವಿದ್ಯಾರ್ಥಿಗಳಾಗಿದ್ದವರು. ದೇಶಾದ್ಯಂತದ ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ, ಹೈಸ್ಕೂಲುಗಳಲ್ಲಿ ಶಿಕ್ಷಕ ವೃತ್ತಿಯ ದೀಕ್ಷೆ ಕೈಗೊಂಡವರು ಬಹುಮಂದಿ ನೇಪಾಳದ ಪಶುಪತಿದೇವಸ್ಥಾನ, ಭಾರತ ಮತ್ತು ವಿದೇಶಗಳಲ್ಲಿ ಇರುವ ಶೃಂಗೇರಿ ಶಂಕರಮಠಗಳು, ಬೆಂಗಳೂರು-ಮೈಸೂರಿನಂತಹ ಮಹಾನಗರಗಳಲ್ಲಿರುವ ಪ್ರತಿಷ್ಠಿತ ದೇವಾಲಯಗಳು-ಇಲ್ಲೆಲ್ಲ ಪ್ರಧಾನ ಅರ್ಚಕರಾಗಿ ಕಾರ್ಯನಿರ್ವಹಣೆ ಪೌರೋಹಿತ್ಯ; ಶಾಸ್ತ್ರಪ್ರವಚನ; ಸನಾತನ ಧರ್ಮ ಪ್ರಸಾರ 'ಶೃಂಗೇರಿಯಲ್ಲಿ ಅಧ್ಯಯನ ಮಾಡಿದವರು'ñಎಂದು ಮನ್ನಣೆಯ ಮಣೆ ñಇದು ಈ ಮಹಾಪಾಠಶಾಲೆಯ ಪ್ರಾಕ್ತನ ವಿದ್ಯಾರ್ಥಿಗಳ ಭಾಗ್ಯವಿಶೇಷ, ಶಾರದಾಂಬೆಯ ಅನುಗ್ರಹ; ಗುರುವರೇಣ್ಯರ ಆಶೀರ್ವಚನ.

## ವಿಶಿಷ್ಟ ವಾಸ್ತುವಿನ್ಯಾಸದ ಶಾಲಾಸೌಧ

ಮಹಾನ್ ಸಾಧಕರೂ, ಸಿದ್ಧಸಂಕಲ್ಪರೂ ಆದ ಶ್ರೀಭಾರತೀತೀರ್ಥ ಮಹಾಸ್ವಾಮಿಗಳವರ ಆಶಯದಂತೆ ಶತಮಾನೋತ್ಸವದ ನೆನಪನ್ನು ಶಾಶ್ವತಗೊಳಿಸಲು ಪ್ರಕೃತಿ ರಮಣೀಯವಾದ ಕಾಲಭೈರವ ಗುಡ್ಡದಲ್ಲಿ ವಿಶಿಷ್ಟವಾಸ್ತು ವಿನ್ಯಾಸದ ನೂತನ ಶಾಲಾಸೌಧ ರೂಪುಗೊಂಡಿದೆ. ಪೇಟೆಯ ಗೌಜು-ಗದ್ದಲಗಳಿಂದ ದೂರವಿರುವ ಈ ಪರಿಸರಕ್ಕೆ ತಂಪುನೀಡುವ ಹಸಿರು ಮರಗಳ ಹೊದಿಕೆ, ಪಕ್ಕದಲ್ಲೇ ಜುಳು-ಜುಳು ಹರಿಯುವ ತುಂಗೆ, ಜತೆಗೆ ಈ ಕಟ್ಟಡದ ಮೆಟ್ಟಲೇರುವಾಗಲೇ ಎದುರಾಗುವ ಒಂದು ಕೃತಕ ಜಲಪಾತ; ಮುಳುಹುಲ್ಲು ಮಾಡಿನ ಒಂದು ಕುಟೀರ, ಅಲ್ಲಿ ಆಚಾರ್ಯ ಶಂಕರರ ಮತ್ತು ಅವರ ನಾಲ್ಕು ಮಂದಿ ಶಿಷ್ಯರ ಹಾಲುಗಲ್ಲಿನ ಪ್ರತಿಮೆ. ಹೆಂಚಿನ ಛಾವಣಿಯ ವಿಶಿಷ್ಟ ವಾಸ್ತುವಿನ್ಯಾಸ; ಈ ಕಟ್ಟಡ ನಿರ್ಮಿಸುವಾಗ ಅಲ್ಲಿದ್ದ ಆರೆಂಟು ಮರಗಳನ್ನು ಮಾತ್ರ ತೆಗೆದಿರುವುದರಿಂದ ಕಟ್ಟಡದ ನಡುವೆ ಹಾಗೂ ಪಕ್ಕದಲ್ಲೆಲ್ಲ ನೈಸರ್ಗಿಕವಾಗಿ ಬೆಳೆದು ನಿಂತಿರುವ ಮೂರಾಳೆತ್ತರದ ಮರಗಳು; ಮುಖಮಂಟಪದಲ್ಲಿ ಮರದ ಕಲ್ಮಾತಕ ಕಂಬಗಳು; ಅವುಗಳ ನಡುವೆ ಕೃತಕವಲ್ಲದ ಆಸನವ್ಯವಸ್ಥೆ; ವಿಶಿಷ್ಟ ಚಿತ್ತಾರದ ಮರದ ಕೆತ್ತನೆಯ ಪ್ರಧಾನದ್ವಾರ. ಇಕ್ಕೆಲಗಳ ಗೋಡೆಯಲ್ಲಿ ಶ್ರೀಮಠದ ಲಾಂಛನವಾದ ಹಂಸ ಹಾಗೂ ಶಾರದಾಂಬೆಯ ಮರದ ಕೆತ್ತನೆಯ ಕಲಾಕೃತಿಗಳು. ಗುರುಕುಲಮಾದರಿಯ ಈ ಕಟ್ಟಡ ಮತ್ತು ಅದರ ಸುಂದರ ಪರಿಸರ ಯಾರಿಗಾದರೂ ವಿಶ್ವಕವಿ ರವೀಂದ್ರರ ಶಾಂತಿನಿಕೇತನದ ನೆನಪು ತಾರದಿರದು.

# ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ

**(ಅಂತರಾಷ್ಟ್ರೀಯ ಮಟ್ಟದ ಸ್ಥಾನಿಕ ಬ್ರಾಹ್ಮಣ ಸಂಘಗಳ ಹಾಗೂ ಸಂಪನ್ಮೂಲ ವ್ಯಕ್ತಿಗಳ ಒಕ್ಕೂಟ)**
**ಶ್ರೀ ಸುಬ್ರಹ್ಮಣ್ಯ ಸದನ, ಬಿಜೈ ರಸ್ತೆ, ಮಂಗಳೂರು**

## ಪ್ರಕಟಣೆ

ಕೆಲವು ಅನ್ಯ ಪಂಗಡದ ಬ್ರಾಹ್ಮಣರು ಸ್ಥಾನಿಕ ಬ್ರಾಹ್ಮಣರಿಗೆ ಕಳೆದೆರಡು ಶತಮಾನಗಳಿಂದ ನಾನಾಕಾರಣಗಳಿಂದಾಗಿ ನಾನಾ ರೀತಿಯ ಪೀಡೆಗಳನ್ನು ಕೊಟ್ಟು ತುಳಿಯಲು ಯತ್ನಿಸಿದ್ದು ಈಗ ಇತಿಹಾಸ. ಈ ಎಲ್ಲಾ ಪೀಡೆಗಳನ್ನು ಸಹಿಸುತ್ತಾ, ಪ್ರತಿಭಟಿಸುತ್ತಾ ಜೊತೆಗೆ ನಮ್ಮ ಸಮಾಜದ ಹಿರಿಯರ ಸಂಘಟಿತ ಪ್ರಯತ್ನ ಹಾಗೂ ಮಾರ್ಗದರ್ಶನದಿಂದ ಎಲ್ಲರೂ ಕಷ್ಟಪಟ್ಟು ವಿದ್ಯಾಭ್ಯಾಸ ಪಡೆದು ದುಡಿದು ಪುನಃ ಸಮಾಜದ ಮೇಲ್‌ಸ್ತರದಲ್ಲೇ ಸ್ಥಾನಿಕ ಬ್ರಾಹ್ಮಣರು ಗುರುತಿಸುವಂತಾಗಿರುವುದು ತುಳಿತಕ್ಕೊಳಗಾಗಿರುವ ಇತರ ಸಮಾಜಗಳಿಗೆ ಒಂದು ಮಾದರಿಯಾಗಿರುವುದು ಕಳೆದ ನೂರು ವರ್ಷಗಳಲ್ಲಿ ನಡೆದ ಬೆಳವಣಿಗೆಯಾಗಿದೆ. ಸಂಘಟನೆಯನ್ನು ಇತರರ ವಿರುದ್ಧ ಪಿತೂರಿ ಹೂಡುವುದಕ್ಕೋ ಅಥವಾ ದ್ವೇಷ ಸಾಧಿಸುವುದಕ್ಕೋ ಅಥವಾ ತಾವು ಇತರರಿಗಿಂತ ಒಂದು ತೂಕ ಹೆಚ್ಚೆಂಬ ಮೇಲರಿಮೆ ಪ್ರಚಾರ ಮಾಡುವುದಕ್ಕೋ ಬಳಸಿಕೊಳ್ಳದೆ,ನಮ್ಮ ಸಮಾಜದ ಸದಸ್ಯರ ಏಳಿಗೆಗಾಗಿ ಮಾತ್ರಾ ಬಳಸಿಕೊಳ್ಳುತ್ತಿರುವುದೂ ಕೂಡಾ ಇತರರಿಗೆ ಮಾದರಿಯಂತಿದೆ . ಆದರೂ ಈ ಇಪ್ಪತ್ತೊಂದನೇ ಶತಮಾನದಲ್ಲಿ ಕೂಡಾ ಸ್ಥಾನಿಕ ಬ್ರಾಹ್ಮಣರ ವಿರುದ್ಧ ಪಿತೂರಿ ಹೂಡುವವರ ಕೂಟಗಳು ಅಲ್ಲಲ್ಲಿ ಉಳಿದುಕೊಂಡಿರುವುದು ಈ ಕೆಳಗಿನ ಪ್ರಸಂಗದಿಂದ ಖಚಿತವಾಗುತ್ತದೆ. ಹಾಗೂ ನಾವು ಒಗ್ಗಟ್ಟನ್ನು ಮರೆಯಬಾರದು ಎಂಬ ವಾದಕ್ಕೆ ಪುಷ್ಠಿ ನೀಡುತ್ತದೆ.

ಕಾಸರಗೋಡಿನಲ್ಲಿ "ಶಿವ ಬ್ರಾಹ್ಮಣ ಸಭಾ" ಎಂಬ ಹೆಸರಿನಲ್ಲಿ ಸ್ಥಾನಿಕ ಬ್ರಾಹ್ಮಣರು ಕಳೆದ ಐವತ್ತು ವರ್ಷಗಳಿಂದ ನಮ್ಮವರ ಸಂಘವನ್ನು ಸ್ಥಾಪಿಸಿದ್ದು, ಪ್ರಸ್ತುತ ಶ್ರೀ ಎ ವಿ ಶ್ಯಾನುಭಾಗ್ ಇವರು ಗೌರವಾಧ್ಯಕ್ಷರೂ ಹಾಗೂ ಡಾ। ಎಮ್ ಸತ್ಯನಾಥ(ಮೊಬೈಲ್: 09447347170)ರವರು ಅಧ್ಯಕ್ಷರಾಗಿದ್ದಾರೆ. ಸುಮಾರು ನೂರೈವತ್ತು ಕುಟುಂಬಗಳೂ ಈ ಸಂಘದ ಸದಸ್ಯರಾಗಿವೆ. ಕಳೆದ ನಾಲ್ಕೈದು ಶತಮಾನಗಳಿಂದಲೂ ಈ ಜಿಲ್ಲೆಯ ಮೂರು ಪ್ರಖ್ಯಾತ ದೇವಸ್ಥಾನಗಳ (ಉಡುಪಿಯ ಪರ್ಯಾಯ ಪೀಠವನ್ನೇರುವ ಯತಿಗಳು ಮೊತ್ತಮೊದಲು ಭೇಟಿ ನೀಡುವ ದೇವಸ್ಥಾನವೂ ಸೇರಿಸಿ) ಮುಖ್ಯಸ್ಥರೂ ಹಾಗೂ ಅರ್ಚಕರು ಆಗಿರುವವರೂ ಕೂಡಾ ಈ ಸಂಘದ ಸದಸ್ಯರಾಗಿದ್ದಾರೆ. ಸಂಘವೂ ಈ ದೇವಸ್ಥಾನಗಳ ಎಲ್ಲಾ ಚಟುವಟಿಕೆಗಳಲ್ಲೂ ಇತರ ಪಂಗಡಗಳ ಬ್ರಾಹ್ಮಣರೊಂದಿಗೆ ಭಾಗವಹಿಸುತ್ತಿದೆ. "ಶಿವ ಬ್ರಾಹ್ಮಣ ಸಭಾ"ವು ಕಾಸರಗೋಡು ಜಿಲ್ಲೆಯಿಂದ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದಿಂದ ಮಾನ್ಯತೆ/ಸದಸ್ಯತನ ಪಡೆದಿರುವ ಏಕೈಕ ಸಂಸ್ಥೆಯಾಗಿದೆ. ಕಾಸರಗೋಡು ಜಿಲ್ಲೆಯಲ್ಲಿ ಕಾರ್ಯಾಚರಿಸುತ್ತಿರುವ 2005ನೇ ಇಸವಿಯಲ್ಲಿ ಸ್ಥಾಪನೆಯಾದ ಬ್ರಾಹ್ಮಣ ಪರಿಷತ್ತು ಎಂಬ ವಿವಿಧ ಪಂಗಡಗಳ ಬ್ರಾಹ್ಮಣರ ಒಕ್ಕೂಟಕ್ಕೂ "ಶಿವಬ್ರಾಹ್ಮಣ ಸಭಾ"ವು ಸ್ಥಾಪಕ ಸದಸ್ಯನಾಗಿದೆ. ಹಾಗೂ ಈ ಒಕ್ಕೂಟದ ಅಧ್ಯಕ್ಷಗಿರಿಯೂ ಸೇರಿದಂತೆ ಅನೇಕ ಹುದ್ದೆಗಳನ್ನೂ ಸಭಾವು ನಿಭಾಯಿಸಿದೆ ಕೂಡಾ.

ಕಾಸರಗೋಡಿನಲ್ಲಿ ಸ್ಥಾನಿಕ ಬ್ರಾಹ್ಮಣರ ಅಭಿವೃದ್ಧಿಯನ್ನು ಸಹಿಸದ ಕೆಲವು ಅನ್ಯ ಪಂಗಡದ ಬ್ರಾಹ್ಮಣರ ಕುಮ್ಮಕ್ಕಿನಿಂದಾಗಿ ಕೆಲವು ಸ್ಥಾನಿಕ ಬ್ರಾಹ್ಮಣರಲ್ಲದ ಕುಟುಂಬಗಳು ಒಟ್ಟಾಗಿ ಹೊಸ ಸಂಘವೊಂದನ್ನು ಸ್ಥಾಪಿಸಿಕೊಂಡು ಅದಕ್ಕೆ ಸ್ಥಾನಿಕ ಬ್ರಾಹ್ಮಣ ಸಂಘವೆಂದು ಹೆಸರು ನೀಡಲು ಹೋಗಿರುವುದು ವಿಷಯದ ತಿರುಳು. ತಾನೇ ಸ್ವತಃ ಸ್ಥಾಪಕ ಸದಸ್ಯನಾಗಿರುವ ಬ್ರಾಹ್ಮಣ ಪರಿಷತ್ತಿನಲ್ಲೇ ಕೆಲವರು ಈ ಡೂಪ್ಲಿಕೇಟು ಸಂಘಕ್ಕೆ ಮಾನ್ಯತೆ ನೀಡಲು ವಶೀಲಿ ಭಾಜಿ ನಡೆಸಿರುವುದು ಇದಕ್ಕೆ ಕೆಲವರ ಕುಮ್ಮಕ್ಕಿದೆ ಎನ್ನುವುದಕ್ಕೆ ಆಧಾರವಾಗಿದೆ. ವಿಷಯ ತಿಳಿದ ತಕ್ಷಣವೇ ಕಾರ್ಯಪ್ರವೃತ್ತರಾದ "ಶಿವಬ್ರಾಹ್ಮಣ ಸಭಾ" ಹಾಗೂ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲವು ಸ್ಥಾನಿಕ ಬ್ರಾಹ್ಮಣರ ಬಗ್ಗೆ ಜನಸಾಮಾನ್ಯರಲ್ಲಿ ತಪ್ಪು ಕಲ್ಪನೆ ಮೂಡಿಸಲು ಅವರ ಸಂಘಟನೆಯನ್ನು ಮುರಿಯಲು ಹಾಗೂ ಅವರನ್ನು ಮೋಸ ಮಾಡಲು ಹೂಡಿರುವ ಈ ಸಂಚನ್ನು ವಿರೋಧಿಸಿ ಸಂಘಗಳ ರಿಜಿಸ್ಟ್ರಾರ್‌ರವರಿಗೆ ವಿಷಯವನ್ನ ಮನವರಿಕೆ ಮಾಡಿಸಿಕೊಟ್ಟು ಈ ಡುಪ್ಲಿಕೇಟು ಸಂಘವನ್ನು ಸ್ಥಾನಿಕ ಬ್ರಾಹ್ಮಣ ಸಂಘವೆಂದು ರಿಜಿಸ್ಟರ್ ಮಾಡದಂತೆ ತಡೆದಿದೆ. ಆದಾಗ್ಯೂ ಅವರು ಶಿವ ಬ್ರಾಹ್ಮಣ ಸಂಘವೆಂಬ ಹೆಸರಿನಲ್ಲಿ ನೋಂದಣಿ ಮಾಡಿರುತ್ತಾರೆ.ಸ್ಥಾನಿಕ ಬ್ರಾಹ್ಮಣರಲ್ಲದವರು ತಮ್ಮನ್ನು ತಾವು ಸ್ಥಾನಿಕ ಬ್ರಾಹ್ಮಣರೆಂದು ಕರೆದುಕೊಂಡು ನಮ್ಮ ಹೆಸರನ್ನು ಅವರ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುವುದರ ವಿರುದ್ಧ ನಮ್ಮ ಆಕ್ಷೇಪಣೆ ಹಾಗೂ ಹೋರಾಟವಿದೆ.

ಸ್ಥಾನಿಕ ಬ್ರಾಹ್ಮಣ ಎಂಬ ಜಾತಿಯು ಸಾವಿರಾರು ವರ್ಷಗಳಿಂದ ತುಳುನಾಡಿನಲ್ಲಿ ಬ್ರಾಹ್ಮಣಿಕೆಯನ್ನು ಪೋಷಿಸುತ್ತಾ ರಾಜಾಧಿರಾಜರುಗಳಿಂದ ಪ್ರೋತ್ಸಾಹ ಹಾಗೂ ಉಂಬಳಿಗಳನ್ನು ಪಡೆಯುತ್ತಾ ಬಂದಿರುವ ಸಮಾಜವಾಗಿದೆ. ಇಂದು ತುಳು ನಾಡಿನಲ್ಲಿರುವ ದೇವಸ್ಥಾನಗಳಲ್ಲಿ ಬಹುಪಾಲು ದೇವಸ್ಥಾನಗಳನ್ನು ಕಟ್ಟಿದ, ಆಡಳಿತ ನಡೆಸಿದ, ಅರ್ಚಕರು ಹಾಗೂ ತಂತ್ರಿಗಳಾಗಿದ್ದ ಸಮಾಜ ನಮ್ಮದು. ಸ್ಥಾನಿಕ ಬ್ರಾಹ್ಮಣ ಸಮಾಜದ ಇತಿಹಾಸವನ್ನು ಗುರುತಿಸಿ ಬ್ರಾಹ್ಮಣತ್ವದ ಮೇಲಿನ ನಮ್ಮ ಅಧಿಕಾರವನ್ನು ಮಾನ್ಯ ಮಾಡಿದ ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳ ರಾಯಸವೂ ನಮ್ಮಲ್ಲಿದೆ. ಹಾಗಾಗಿ ನಮ್ಮ ಸಮಾಜದ ಸದಸ್ಯರಿಗೆ ಹಾಗೂ ವಿವಿಧ ಸಂಘಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಈಗ ನಮ್ಮ ಹೆಸರನ್ನು ಹೋಲಿಕೊಂಡು ಜನ್ಮ ತಾಳಿರುವ ಹಾಗೂ ಈ ಪಿತೂರಿಯ ಮುಂದುವರಿಯುವ ಭಾಗವಾಗಿ ಇನ್ನೂ ಅಲ್ಲಲ್ಲಿ ಜನ್ಮ ತಾಳಬಹುದಾದ ಇಂತಹ ಡುಪ್ಲಿಕೇಟ್ ಸಂಘಗಳ ಬಗ್ಗೆ ದಯವಿಟ್ಟು ಜಾಗರೂಕರಾಗಿರಿ. ತಪ್ಪಿಯೂ ಅಂತಹಾ ಸಂಘಗಳ ಸದಸ್ಯತನ ಪಡೆಯಬೇಡಿರಿ. ಜೊತೆಗೆ ವೈವಾಹಿಕ ಇತ್ಯಾದಿ ಸಂಬಂಧಗಳನ್ನು ಬೆಳೆಸುವಾಗ ಸ್ಥಾನಿಕ ಬ್ರಾಹ್ಮಣರೆಂಬುದನ್ನು ಖಚಿತ ಪಡಿಸಿಕೊಳ್ಳಬೇಕಾದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ಅಧ್ಯಕ್ಷರು–ಶ್ರೀ ಎಮ್.ಆರ್. ವಾಸುದೇವ,–9448125412/ ಕಾರ್ಯದರ್ಶಿ–ಎನ್ ಕೆ ಜಗನ್ನಿವಾಸರಾವ್– 9448260888) ಅಥವಾ ಆಯಾಯ ಪ್ರದೇಶದ ಅಧಿಕೃತ ಸಂಘಗಳನ್ನು ಸಂಪರ್ಕಿಸಿರಿ.

ಇಂತಹಾ ಸಮಸ್ಯೆಗಳಿಗೆ ಒಗ್ಗಟ್ಟಿನ ಹೋರಾಟ ನೀಡಬೇಕಾದ್ದರಿಂದ ನಮ್ಮ ಸಮಾಜದ ಎಲ್ಲಾ ಸಂಘಟನೆಗಳೂ ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಸದಸ್ಯರಾಗಬೇಕೆಂದು ಈ ಮೂಲಕ ಕರೆ ನೀಡುತ್ತಿದ್ದೇವೆ.

**ಅಧ್ಯಕ್ಷರು–ಶ್ರೀ ಎಮ್. ಆರ್. ವಾಸುದೇವ–9448125412**
**ಕಾರ್ಯದರ್ಶಿ–ಎನ್ ಕೆ ಜಗನ್ನಿವಾಸರಾವ್– 9448260888**

### ಶೃಂಗೇರಿ ಜಗದ್ಗುರುಗಳು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮನ

■...1ನೇ ಪುಟದಿಂದ

ಶತಮಾನ ಪೂರೈಸಿದ ಈ ಶ್ರೀರಾಮ ದೇವಸ್ಥಾನವು ಹಿಂದೆ ಶೃಂಗೇರಿಯ ಶ್ರೀ ಶಾರದಾ ಪೀಠದಿಂದಲೇ ಪ್ರತಿಷ್ಠಾಪಿಸಲ್ಪಟ್ಟಿತ್ತು.ಈ ದೇವಸ್ಥಾನದ ಶತಮಾನೋತ್ಸವ ಸಮಾರಂಭದ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಶ್ರೀ ಶ್ರೀಗಳ ದಿವ್ಯ ಉಪಸ್ಥಿತಿಯಲ್ಲಿ ನೆರವೇರಲಿದ್ದು, ಅದಕ್ಕಾಗಿ ಎಪ್ರಿಲ್ 12ರಿಂದ 14ರವರೆಗೆ ಜಗದ್ಗುರುಗಳು ಅಲ್ಲಿ ಮೊಕ್ಕಾಂ ಇರುವರು. 14ರಂದು ಸಂಜೆ ಉಭಯ ಶ್ರೀಗಳೂ ಶ್ರೀ ಕ್ಷೇತ್ರ ಶೃಂಗೇರಿಗೆ ಮರು ಪ್ರಯಾಣ ಬೆಳೆಸುವರು. ಉಭಯ ಶ್ರೀಗಳ ದ.ಕ. ಜಿಲ್ಲೆಯ ಭೇಟಿಯ ಈ ಶುಭ ಸಂದರ್ಭದಲ್ಲಿ ಸ್ಥಾನಿಕ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಆಶೀರ್ವಾದ ಪಡೆಯಬೇಕೆಂದು ವಿನಂತಿಸಿಕೊಳ್ಳಲಾಗಿದೆ.

# ಉಡುಪಿಯ ಶಾರದಾ ಮಂಟಪದಲ್ಲಿ ಯೋಗ ಶಿಬಿರ

**ಪತಂಜಲಿ ಯೋಗಪೀಠ, ಹರಿದ್ವಾರ-ಭಾರತ್ ಸ್ವಾಭಿಮಾನ ಟ್ರಸ್ಟ್, ಜಿಲ್ಲಾ ಸಮಿತಿ ಉಡುಪಿ ಮತ್ತು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಇವರ ಸಹಭಾಗಿತ್ವದಲ್ಲಿ ಪತಂಜಲಿ ಆರೋಗ್ಯ ಕೇಂದ್ರ ಚಿಟ್ಪಾಡಿ, ಉಡುಪಿ ಇವರ ಸಹಕಾರದೊಂದಿಗೆ ಬಾಬಾ ಶ್ರೀ ರಾಮ್‌ದೇವಜಿ ಮಹಾರಾಜ ಇವರಿಂದ ತರಬೇತಿಗೊಂಡ ನುರಿತ ಶಿಕ್ಷಕರಿಂದ**


## ಉಚಿತ ಪ್ರಾಣಯೋಗ ಶಿಬಿರವು

**ದಿನಾಂಕ 26-03-2015ರಿಂದ 31-03-2015ರ ವರೆಗೆ ಪ್ರತಿದಿನ ಸಂಜೆ 5-30 ರಿಂದ 7-00ರ ವರೆಗೆ ಉಡುಪಿಯ ಶ್ರೀಶಾರದಾ ಮಂಟಪದ ಸಭಾಭವನದಲ್ಲಿ ನೆರವೇರಲಿರುವುದು.**

ಈ ಪ್ರಾಣಯಾಮದಿಂದ ಮನಸ್ಸಿನ ನಿಗ್ರಹ ಸಾಧ್ಯವಾಗುವುದರಿಂದ ಧ್ಯಾನ ಹಾಗೂ ಸಮಾಧಿಗಳ ಸಿದ್ಧಿಯು ಸಹಜವಾಗಿ ಆಗುತ್ತದೆ. ಯೋಗವು ಒಂದು ಪೂರ್ಣ ವಿಜ್ಞಾನ, ಒಂದು ಪೂರ್ಣ ಜೀವನ ಶೈಲಿ, ಒಂದು ಪೂರ್ಣ ಚಿಕಿತ್ಸಾ ಪದ್ಧತಿ, ಒಂದು ಆಧ್ಯಾತ್ಮ ವಿದ್ಯೆಯಾಗಿದೆ. ಆಧುನಿಕ ಮಾನವ ಸಮಾಜವು ಒತ್ತಡ, ಅಶಾಂತಿ ಹಾಗೂ ಅಜ್ಞಾನದ ಬಲೆಗೆ ಬಿದ್ದಿದೆಯೋ? ಅದಕ್ಕೆ ಪರಿಹಾರವನ್ನು ಕೇವಲ ಯೋಗ ನೀಡಬಲ್ಲದು. ಈ ಶಿಬಿರದ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕಾಗಿ ಪ್ರಾರ್ಥಿಸುತ್ತೇವೆ.

ಸಕ್ಕರೆ ಕಾಯಿಲೆ, ರಕ್ತದ ಒತ್ತಡ, ಹೃದಯ ಸಂಬಂಧಿ ತೊಂದರೆ, ಕಿಡ್ನಿಯ ತೊಂದರೆ, ಅಸ್ತಮಾ ಹಾಗೂ ಇತರೇ ಶ್ವಾಸಕೋಶ ಸಂಬಂಧೀ ತೊಂದರೆಗಳಿಗೆ ಮತ್ತು ಮಾನಸಿಕ ಕಾಯಿಲೆಗಳಿಗೆ ಪ್ರಾಣಾಯಾಮದ ಅಭ್ಯಾಸದಿಂದ ಸಂಪೂರ್ಣ ಮುಕ್ತಿ ದೊರಕುತ್ತದೆ.

ಶಿಬಿರಾರ್ಥಿಗಳು ಬರುವಾಗ ಬೆಡ್‌ಶೀಟ್ ಮತ್ತು ಕರವಸ್ತ್ರತರಬೇಕು ಹಾಗೂ ಖಾಲಿ ಹೊಟ್ಟೆಯಲ್ಲಿ ಬರಬೇಕು. ಸಂಪರ್ಕಕ್ಕಾಗಿ 9343360236 ಪತಂಜಲಿ ಆರೋಗ್ಯ ಕೇಂದ್ರವನ್ನು ಸಂಪರ್ಕಿಸಬೇಕಾಗಿ ವಿನಂತಿ.



# ಶ್ರೀಶಾರದಾ ದೇವಸ್ಥಾನ

**ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 2. ಫೋನ್ : 2520754**

ಪ್ರಿಯರೇ,
ಸ್ವಸ್ತಿ ಶ್ರೀ ಚಾಂದ್ರ ಶ್ರೀ ಮನ್ಮಥ ನಾಮ ಸಂ।ರದ ಚೈತ್ರ ಶುಕ್ಲ ತದಿಗೆಯಂದು ತಾ.22-03-2015ನೇ ಆದಿತ್ಯವಾರ ಸಂಜೆ ಗಂಟೆ 5-00ರಿಂದ

**ಪರಿಸರದ ಭಕ್ತ ಬಾಂಧವರು ಭಕ್ತಿ-ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ ಶ್ರೀಶಾರದಾ ಪರಮೇಶ್ವರೀ ಸನ್ನಿಧಿಯಲ್ಲಿ ಪ್ರತಿವರ್ಷದಂತೆ**

## ಸಾಮೂಹಿಕ ಶ್ರೀದುರ್ಗಾನಮಸ್ಕಾರ ಪೂಜೆಯು

ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಸೇವಾ ರೂಪದಲ್ಲಿ ರೂ.125/-ನ್ನು ನೀಡಿ ಪೂಜೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಅಪರಾಹ್ನ 3ರಿಂದ ದೀಪವಿಟ್ಟು ಮಂಡಲ ರಚನೆ, ಸಂಜೆ 5 ರಿಂದ ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತಿ ಪಾರಾಯಣ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ ವಿಧಿಗಳು ನಡೆಯಲಿವೆ.

**– ಆಡಳಿತ ಮಂಡಳಿ**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

ಪ್ರಿಯರೇ,
ಸ್ವಸ್ತಿ ಶ್ರೀ ಚಾಂದ್ರ ಶ್ರೀ ಮನ್ಮಥ ನಾಮ ಸಂ।ರದ ಚೈತ್ರ ಶುಕ್ಲ ಮೀನ ಮಾಸ ತಾ.21-03-2015ರಿಂದ ತಾ.29-03-2015ರ ವರೆಗೆ **ಕಿರುನವರಾತ್ರಿ ಮಹೋತ್ಸವವು** ಜರಗಲಿರುವುದು.
ತಮಗೆಲ್ಲರಿಗೂ ಆದರದ ಸ್ವಾಗತ — ಕಾರ್ಯದರ್ಶಿ



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576 102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ವೈದ್ಯಕೀಯ ವೇದಿಕೆ-ಆರೋಗ್ಯ ಮಾಹಿತಿ

ಡಾ। ವೈ. ಸುದರ್ಶನ ರಾವ್



**ಪ್ರಶ್ನೆ: ಗರ್ಭಧಾರಣೆ ಮತ್ತು ಆರೋಗ್ಯ**

ಮಹಿಳೆಯೊಬ್ಬಳ ಜೀವನದಲ್ಲಿ ಇದೊಂದು ವಿಶೇಷ ಸಂದರ್ಭ. ಹೊಸ ಸದಸ್ಯನ ಆಗಮನದಿಂದ ಸಂತೋಷಕ್ಕೆ ಕಾರಣವಾಗುವ ಈ ಸಂದರ್ಭದಲ್ಲೇನಾದರು ಹೆಚ್ಚು ಕಡಿಮೆಯಾದರೆ ಕಳವಳ ಕಾತರ ದು:ಖಗಳು ಕಟ್ಟಿಟ್ಟ ಬುತ್ತಿ. ಗರ್ಭಧಾರಣೆಯ ತೊಂದರೆಗಳು ಅತಿ ಸಾಮಾನ್ಯವಾದುದರಿಂದ ಹಾಗೂ ಅವಲ್ಲಿ ಹೆಚ್ಚಿನವು ತಡೆಗಟ್ಟಲು ಸಾಧ್ಯವಂತಹವಾದುದರಿಂದ ಈ ಬಗ್ಗೆ ಒಂದು ಸಂಕ್ಷಿಪ್ತ ಲೇಖನ ಇಲ್ಲಿದೆ.

ಅಂಡಾಣು ವೀರ್ಯಾಣುವಿನ ಸಮಾಗಮದಿಂದ ಉಂಟಾಗುವುದು ಭ್ರೂಣ. ಇದೇ ಗರ್ಭಧಾರಣೆ. ಈ ಸಮಾಗಮ ನಡೆಯುವುದು ಹೆಚ್ಚಿನವರು ತಿಳಿದುಕೊಂಡಿರುವಂತೆ ಗರ್ಭಕೋಶದಲ್ಲಿ ಅಲ್ಲ, ಅಂಡನಾಳದಲ್ಲಿ. ಇಲ್ಲಿ ಉಂಟಾದ ಭ್ರೂಣ ತೆವಳಿಕೊಂಡು ಗರ್ಭಕೋಶಕ್ಕೆ ಬರಬೇಕು, ಅಲ್ಲಿ ಬೆಳೆಯಬೇಕು. ಅದು ನಿಯಮ. ಗರ್ಭಕೋಶಕ್ಕೆ ಹೋಗುವುದು ಬಿಟ್ಟು ಎಲ್ಲೊಲ್ಲೋ ಈ ಭ್ರೂಣ ಅಲೆದಾಡಿ ಬೆಳೆದರೆ ಅದನ್ನು ಎಕ್ಟೋಪಿಕ್‌ಪ್ರೆಗ್ನೆನ್ಸಿ ಎನ್ನುತ್ತಾರೆ. ಈ ಸಂದರ್ಭದಲ್ಲಿ ಸುಮಾರು ಒಂದೂವರೆ ತಿಂಗಳು ಪ್ರಾಯದ ತನಕ ಬೆಳೆದ ಭ್ರೂಣ ಒಡೆದು ಹೊಟ್ಟೆಯೊಳಗೆ ರಕ್ತ ಸ್ರಾವವಾಗುತ್ತದೆ. ಪ್ರಾಣಾಪಾಯವಿರುವ ಸಂದರ್ಭವಿದು. ಹಾಗಾಗಿ ಮುಟ್ಟು ಮುಂದೆ ಹೋದೊಡನೆ ಗರ್ಭಸರಿಯಾದ ಜಾಗದಲ್ಲಿ ಧಾರಣೆಯಾಗಿದೆ ಎಂದು ಖಚಿತ ಪಡಿಸಿಕೊಳ್ಳುವುದಗತ್ಯ.

ಗರ್ಭವತಿಯಾಗಿರುವ ಮೊದಲನೆಯ ಮೂರು ತಿಂಗಳಲ್ಲಿ ಹೊಟ್ಟೆ ತೊಳೆಸುವುದು ಹಾಗೂ ವಾಂತಿ ಬಿಟ್ಟರೆ ಬೇರೇನು ಮುಖ್ಯ ತೊಂದರೆಯಿರದು. ಮಗುವಿಗೆ ಹಾಗೂ ತಾಯಿಗೆ ಟೆಟನಸ್ ಖಾಯಿಲೆ ಬಾರದಂತೆ ಟೆಟನಸ್ ನಿರೋಧಕ ಚುಚ್ಚುಮದ್ದು ತೆಗೆದುಕೊಳ್ಳಬೇಕು. ತಾಯಿಯ ರಕ್ತಹೀನತೆಯು ಗರ್ಭಸ್ಥ ಶಿಶುವಿನ ಬೆಳವಣಿಗೆ೦ಯನ್ನು ಕುಂಠಿತಗೊಳಿಸುತ್ತದೆ. ಹಾಗಾಗಿ ಪೌಷ್ಟಿಕ ಆಹಾರ ತೆಗೆದುಕೊಳ್ಳಬೇಕು. ರಕ್ತಹೆಚ್ಚಿಸುವ ಕಬ್ಬಿಣ ಸತ್ವದ ಹಾಗೂ ಫೋಲಿಕ್ ಆಸಿಡ್ ವಿಟಮಿನ್ ಗುಳಿಗೆಗಳನ್ನು ಹೆರಿಗೆಯಾಗುವ ತನಕ ಸತತವಾಗಿ ತೆಗೆದುಕೊಳ್ಳಬೇಕು. ಮೊದಲ ಮೂರು ತಿಂಗಳಲ್ಲಿ ಯಾವುದೇ ಇನ್ಫೆಕ್ಷನ್ ಆದರೆ ಇನ್ಫೆಕ್ಷನಿಂದಲೂ ಹಾಗೂ ಅದರ ಔಷಧದಿಂದಲೂ ಮಗುವಿಗೆ ಹಾನಿ ಉಂಟಾಗಬಹುದು. ಹಾಗಾಗಿ ಯಾವುದೇ ಇನ್ಫೆಕ್ಷನ್ ಆಗದಂತೆ ಜಾಗ್ರತೆ ವಹಿಸಬೇಕು. (ಹೇಗೆಂದು ಇನ್ಫೆಕ್ಷನ್ ಬಗೆಗಿನ ಲೇಖನದಲ್ಲಿ ವಿವರಿಸಿದೆ). ನಾನಾ ಕಾರಣಗಳಿಂದ ಗರ್ಭ ಪಾತವಾಗುವ ಸಾಧ್ಯತೆ ಮೊದಲ ಮೂರು ತಿಂಗಳಲ್ಲಿ ಜಾಸ್ತಿ ಇರುವುದರಿಂದ ವಿಶ್ರಾಂತಿ ತೆಗೆದುಕೊಳ್ಳುವುದು ಹಾಗೂ ಪ್ರಯಾಣ ಮಾಡದಿರುವುದು ಒಳ್ಳೆಯದು. ಮೂರನೇ ತಿಂಗಳ ಕೊನೆಯಲ್ಲಿ ಶಿಶುವಿಗೆ ಯಾವುದಾದರು ಅಂಗ ಊನವಿದೆಯೇ ಎಂದು ಅಲ್ಟ್ರಾಸೌಂಡ್ ತಪಾಸಣೆ ಮಾಡಿಸಬೇಕು. ಹಾಗೆಯೇ ಮೂವತ್ತು ಮೀರಿದ ತಾಯಂದಿರಿಗೆ ಮೊದಲ ಬಾರಿ ಗರ್ಭ ಧರಿಸುತ್ತಿದ್ದಲ್ಲಿ ಕೆಲವು ಕ್ರೋಮೋಸೋಮುಗಳ ವಿಕಲತೆಯಿರುವ ಶಿಶು ಜನಿಸುವ ಸಾಧ್ಯತೆ ಇದೆ. ಆ ಬಗ್ಗೆ ತಪಾಸಣೆ ನಡೆಸಲು ಇದುವೇ ಸರಿಯಾದ ಸಮಯ.

ಮೂರು ತಿಂಗಳಿನಿಂದ ಆರು ತಿಂಗಳಕಾಲ ಗರ್ಭಿಣಿಯರು ಸ್ವಲ್ಪ ನಿರಾಳವಾಗಿರುವ ಸಮಯ. ವಾಂತಿ ಬವಳಿಕೆ ಈಗ ಕಡಿಮೆಯಾಗಿರುತ್ತದೆ. ಹೊಟ್ಟೆಯಲ್ಲಿರುವ ಮಗುವಿನ ಭಾರ ಇನ್ನು ಹೆಚ್ಚ ಬೇಕಷ್ಟೇ. ಹಸಿವು ಚೆನ್ನಾಗಿದ್ದು ದೇಹದ ತೂಕ ನಿಧಾನವಾಗಿ ಜಾಸ್ತಿಯಾಗುತ್ತದೆ. ಆದರೆ ಈ ಸಮಯದಲ್ಲಿ ತಾಯಿಗೆ ಸಕ್ಕರೆ ಖಾಯಿಲೆ ಹಾಗೂ ಅಧಿಕ ರಕ್ತದೊತ್ತಡದ ಖಾಯಿಲೆ ಬರುವ ಸಾಧ್ಯತೆ ಇರುತ್ತದೆ. ಹಾಗಾಗಿ ಈ ಬಗ್ಗೆ ವಿಶೇಷ ತಪಾಸಣೆ ಮಾಡಿಸಿ ಅಗತ್ಯವಿದ್ದರೆ ಚಿಕಿತ್ಸೆ ಮಾಡಬೇಕು. ಇಲ್ಲವಾದಲ್ಲಿ ಈ ಎರಡು ತೊಂದರೆಗಳಿಂದ ತಾಯಿ ಹಾಗೂ ಮಗು ಇಬ್ಬರಿಗೂ ಹಾನಿಯಾಗುತ್ತದೆ.

ಆರರಿಂದ ಒಂಬತ್ತು ತಿಂಗಳ ಕಾಲಾವಧಿ ಹೆರಿಗೆಗೆ ತಯಾರಿ ಮಾಡುವ ಸಮಯ. ಮಗುವಿನ ಅಂಗಾಂಗಗಳ ಬೆಳವಣಿಗೆ ಪೂರ್ತಿಯಾಗುವ ಸಮಯವಿದು. ಮಗುವಿನ ಬೆಳವಣಿಗೆ ಪ್ರಬುದ್ಧವಾಗುವ ಮುನ್ನ ಅವದಿ ಪೂರ್ವ ಹೆರಿಗೆಯನ್ನು ತಪ್ಪಿಸಲಿಕ್ಕಾಗಿ ಈ ಸಮಯದಲ್ಲಿ ವಿಶ್ರಾಂತಿಯ ಅಗತ್ಯವಿದೆ. ಗರ್ಭದ ನೀರು ಜಾಸ್ತಿಯಾಗುವುದು ಅಥವಾ ಕಡಿಮೆಯಾಗುವುದು, ಯೋನಿಯಿಂದ ರಕ್ತಸ್ರಾವ, ಗರ್ಭದ ನೀರು ಬಸಿದು ಹೋಗುವುದು, ಮಾಸುವಿನ ಬೇರು ಗರ್ಭಕೋಶದಿಂದ ಕಿತ್ತು ಹೋಗುವುದು, ಅನಿರೀಕ್ಷಿತವಾಗಿ ಗರ್ಭದಲ್ಲೆ ಮಗುವಿನ ಮರಣ, ತಾಯಿಯ ರಕ್ತದಲ್ಲಿ ಸಕ್ಕರೆಯ ಅಂಶ ಹಾಗೂ ರಕ್ತದೊತ್ತಡ ಹತೋಟಿ ಮೀರಿ ಹೆಚ್ಚಾಗುವುದು, ಅಪಸ್ಮಾರ ಹೀಗೆ ಅನೇಕ ತೊಂದರೆಗಳು ಈ ಸಮಯದಲ್ಲಿ ಕಾಣಿಸಿಕೊಳ್ಳಬಹುದು. ಈ ಮೇಲಿನ ತೊಂದರೆಗಳನ್ನು ಸಂಪೂರ್ಣವಾಗಿ ತಡೆಗಟ್ಟಲಾಗದಿದ್ದರೂ ವೈದ್ಯರಲ್ಲಿ ನಿಯಮಿತವಾಗಿ ತಪಾಸಣೆ ಮಾಡುತ್ತಿದ್ದರೆ ಆದಷ್ಟು ಬೇಗನೆ ಈ ತೊಂದರೆಗಳನ್ನು ಪತ್ತೆ ಹಚ್ಚಿಚಿಕಿತ್ಸೆ ಮಾಡಬಹುದು.

ಹೆರಿಗೆಯ ಸಮಯ ಅತ್ಯಂತ ಸೂಕ್ಷ್ಮ ಹಾಗೂ ಕಾತರದ ಕ್ಷಣಗಳು. ಹೆರಿಗೆಯು ಯಾವತ್ತೂ ಪರಿಣಿತರ, ಅನುಕೂಲವಿದ್ದಲ್ಲಿ ವೈದ್ಯರ, ಸುಪರ್ಧಿಯಲ್ಲೆ ಆಗಬೇಕು. ಹೆರಿಗೆಯು ಸರಿಯಾಗಿ ಮುಂದುವರಿಯದಿದ್ದಲ್ಲಿ, ಗರ್ಭಕೋಶದ ದ್ವಾರದ ಗಾತ್ರಕ್ಕಿಂತ ಮಗುವಿನ ಗಾತ್ರ ಹೆಚ್ಚಿದ್ದಲ್ಲಿ, ಮಗುವಿನ ತಲೆಮೊದಲು ಹೊರಬರುವುದು ಬಿಟ್ಟು ಬೇರೆ ಭಾಗಗಳು ಹೊರಗೆ ಬಂದಲ್ಲಿ, ಹೆರಿಗೆಯಕಾಲದಲ್ಲಿ ಮಗುವಿಗೆ ಕಷ್ಟವಾದಲ್ಲಿ ಶಸ್ತ್ರಚಿಕಿತ್ಸೆಯ ಮುಖಾಂತರ ಹೆರಿಗೆ ಮಾಡಿಸ ಬೇಕಾಗುತ್ತದೆ. ಅತಿಯಾದ ರಕ್ತಸ್ರಾವ, ಗರ್ಭದ ನೀರು ರಕ್ತಕ್ಕೆ ಸೇರುವುದು, ಗರ್ಭಕೋಶ ಬಿರುಕು ಬಿಡುವುದು ಇವು ತಾಯಿಗೆ ಪ್ರಾಣಾಪಾಯ ಉಂಟು ಮಾಡಬಲ್ಲ ತೊಂದರೆಗಳು, ಮಗುವಿಗೆ ಆಮ್ಲಜನಕದ ಕೊರತೆಯಾಗಿ ಮೆದುಳಿಗೆ ಹಾನಿಯಾಗುವುದು, ದೇಹದ ಭಾಗಗಳಿಗೆ ಗಾಯವಾಗುವುದು ಹಾಗು ಕೆಲವೊಮ್ಮೆ ಶಿಶು ಸತ್ತು ಹೋಗುವುದು ಮಗುವಿಗೆ ಹೆರಿಗೆಯ ಸಂದರ್ಭದಲ್ಲಿ ಆಗಬಹುದಾದ ತೊಂದರೆಗಳು

ಗರ್ಭಕೋಶದಿಂದ ರಕ್ತಸ್ರಾವ ಹಾಗೂ ಗರ್ಭಕೋಶದ ಸೊಂಕು ಹೆರಿಗೆಯ ಬಳಿಕ ತಾಯಿಗೆ ಪ್ರಾಣಾಪಾಯ ತಂದಿಡಬಲ್ಲ ತೊಂದರೆಗಳು. ಮೆದುಳೂ ಸೇರಿ ದೇಹದ ವಿವಿಧ ಭಾಗದ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟುವುದು ಅಪರೂಪವಾದರೂ ಇನ್ನೊಂದು ಗಂಭೀರ ತೊಂದರೆ. ರಕ್ತದೊತ್ತಡ ಹೆಚ್ಚಾಗುವುದು, ಮಾನಸಿಕ ಖಿನ್ನತೆ, ಸ್ತನದ ಸೋಂಕು ಇತರ ಸಮಸ್ಯೆಗಳು

**ಕೊನೆಯಲ್ಲಿ ಗರ್ಭದಾರಣೆಯಿಂದುಂಟಾಗುವ ಆರೋಗ್ಯ ಸಂಬಂಧಿತ ಸಮಸ್ಯೆಗಳನ್ನು ನಿಗ್ರಹಿಸಲು ಕೆಲವು ಸಲಹೆಗಳು**

ಮೊದಲ ಭಾರಿ ಗರ್ಭಧರಿಸಲು 20 ರಿಂದ 30 ವರ್ಷ ಪ್ರಾಯ ಪ್ರಶಸ್ತವಾದುದು.

ಎರಡು ಗರ್ಭಧಾರಣೆಯ ಮಧ್ಯೆ ಕನಿಷ್ಟ ಮೂರು ವರ್ಷಗಳ ಅಂತರವಿರಬೇಕು


ಪದೇ ಪದೇ ಗರ್ಭ ಧರಿಸುವುದು ಒಳ್ಳೆಯದಲ್ಲ. ಇದರಿಂದ ನಿಶ್ಯಕ್ತಿಯ ಜೊತೆಗೆ ಗರ್ಭಕೋಶ ಜಾರುವುದು ಹಾಗೂ ಗರ್ಭಕೋಶದ ಬಾಯಿಯ ಕ್ಯಾನ್ಸರ್ ಬರಬಹುದು.

ಮಗುವಿಗೆ ಹಾಲೂಡಿಸುವುದು ತಾಯಿ ಹಾಗೂ ಮಗುವಿನ ಆರೋಗ್ಯಕ್ಕೆ ಒಳ್ಳೆಯದು. ಹಾಲೂಡಿಸದ ತಾಯಂದಿರಿಗೆ ಸ್ತನದ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚು ಇದೆ

ಗರ್ಭ ಧರಿಸಿರುವುದು ಖಚಿತವಾದ ದಿನದಿಂದ ನಿಯಮಿತವಾಗಿ ತಪಾಸಣೆಗೊಳಗಾಗುವುದು ಹಾಗೂ ವೈದ್ಯರ ಸಲಹೆಗಳ ಪಾಲನೆ ಹಾಗೂ ಪರಿಣಿತರ ಸುಪರ್ಧಿಯಲ್ಲೆ ಹೆರಿಗೆ ಮಾಡಿಸುವುದು ಇವು ಮೂರು ಗರ್ಭಧಾರಣೆ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರವಾಗಿದೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

# ಕನ್ನಡ ಕವಿಕಾವ್ಯ ಪರಿಚಯ-೧೧ : ಷಟ್ಪದಿ ಕವಿ ರಾಘವಾಂಕ-3



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

**ಸಿದ್ಧರಾಮ ಪುರಾಣ :**

ಸೊನ್ನಲಿಗೆ ಎಂಬಲ್ಲಿ 'ನನ್ನಪ್ಪ' ಎಂಬ ಪ್ರಭುವು ಚಾಮಲದೇವಿ ಎಂಬ ಅರಸಿಯೊಂದಿಗೆ ರಾಜ್ಯಭಾರ ಮಾಡುತ್ತಿದ್ದನು. ಆಗ ಆ ಊರಿನಲ್ಲಿದ್ದ ಮುದ್ದಯ್ಯ ಸುಗ್ಗವ್ವೆ ಎಂಬವರಿಗೆ 'ದೇಹವಿಕಾರ ವಿಷಯಂಗಳಳಿದ ಬಳಿಕ' ಮುಪ್ಪಿನಲ್ಲಿ ಶಿವಾಂಶ ಸಂಭೂತನಾದ ಸಿದ್ಧರಾಮನು ಜನಿಸಿದನು. ಇವನ ತಾಯಿ-ತಂದೆಯರು ಈತನಿಗೆ ಧೂಳಿಮಾಕಾಳಯ್ಯನೆಂದು ತಮ್ಮ ಮನೆದೇವರ ಹೆಸರನ್ನಿಟ್ಟಿದ್ದರು. ಈ ಮಗನು ಜಡಭರತನಾಗಿದ್ದುದರಿಂದ ಈತನನ್ನು ಮುದ್ದಯ್ಯನು ದನಕಾಯಲು ಹಾಕಿದ್ದನು. ಅಲ್ಲಿ ಆತನು ಲಿಂಗಾರ್ಚನೆ ಮಾಡುತ್ತಿರಲು ಒಂದು ದಿನ ಸಿದ್ಧರಾಮನಿಗೆ ಶಿವದರ್ಶನವಾಯಿತು. ಸಿದ್ಧರಾಮನಲ್ಲಿಗೆ ಬಂದಿದ್ದ ಶಿವನಿಗೆ ಸಿದ್ಧರಾಮನು ತಿನ್ನಲು ಬೆಳಸಿ (ಎಳತಾದ ಧಾನ್ಯದ ತೆನೆ)ಯನ್ನು ಕೊಟ್ಟು ಉಪಚರಿಸಿದನು, ಆಗ ಶಿವನು ತಾನು ಶ್ರೀಶೈಲದ ಮಲ್ಲಿನಾಥನೆಂದು ಹೇಳಿ ಅಂತರ್ಧಾನನಾದನು. ಶಿವಭಕ್ತಿ ಸಂಪನ್ನನಾದ ಸಿದ್ಧರಾಮನು ತನ್ನಲ್ಲಿ ಮಾತನಾಡಿ ಅಂತರ್ಧಾನನಾಗಿದ್ದ ಶಿವನನ್ನು ಕಾಣುವ ಉದ್ದೇಶದಿಂದ ಶ್ರೀಶೈಲಕ್ಕೆ ಹೋಗುವ 'ಪರಿಷೆ' (ಯಾತ್ರಿಕರ ಗುಂಪು) ಯುವರೊಡನೆ ಶ್ರೀಶೈಲಕ್ಕೆ ಹೋದನು. ಅಲ್ಲಿನ ಪರ್ವತ ಪ್ರದೇಶದಲ್ಲಿ ತನ್ನ ಸಂಗಡಿಗರನ್ನುಳಿದು ಮಲ್ಲಿಕಾರ್ಜುನನನ್ನು ಅರಸುತ್ತಾ "ಮಲ್ಲಯ್ಯಾ ಮಲ್ಲಯ್ಯಾ" ಎಂದು ಬೊಬ್ಬಿಡುತ್ತಾ, ಶಿವನನ್ನು ಕಾಣದೆ ಇದ್ದಾಗ ಕೊನೆಗೆ ಆಳವಾದ ಕಂದರವೊಂದಕ್ಕೆ ಬೀಳಲು ಹವಣಿಸುತ್ತಾನೆ. ಶಿವನು ಪ್ರತ್ಯಕ್ಷನಾಗದಿದ್ದರೆ ತಾನು ಆತ್ಮಾರ್ಪಣೆ ಮಾಡಿಕೊಳ್ಳುತ್ತೇನೆಂಬುದೇ ಅವನ ಉದ್ದೇಶವಾಗಿದ್ದು ಗಿರಿಯೊಂದರ ತುದಿಯಿಂದ ಕೆಳಕ್ಕೆ ಹಾರಲು ಸಿದ್ಧನಾಗುತ್ತಾನೆ. ಆಗ ಶಿವನು ಪ್ರತ್ಯಕ್ಷನಾಗಿ ನಿಜ ರೂಪವನ್ನು ತೋರಿಸುತ್ತಾನೆ. ಊರಿನಿಂದ ಹೊರಟ ಸಿದ್ಧರಾಮನು ಮನೆಗೆ ಬಾರದಿದ್ದುದನ್ನು ಕಂಡ ಮನೆಯವರು ಪರಿಷೆಯವರಿಂದ ವಿಷಯವನ್ನು ತಿಳಿದು ಅವನ ಅಣ್ಣನಾದ ಬೊಮ್ಮಯ್ಯನನ್ನು ಶ್ರೀಶೈಲಕ್ಕೆ ಕಳುಹಿಸುತ್ತಾರೆ. ಅಲ್ಲಿಗೆ ಬಂದ ಬೊಮ್ಮಯ್ಯನು ಸಿದ್ಧರಾಮನಿಗೆ ಶಿವ ದರ್ಶನ ಮಾಡಿಸಿ ಅವನನ್ನು ಊರಿಗೆ ಕರೆದುಕೊಂಡು ಬಂದನು.

ಊರಿಗೆ ಬಂದ ಸಿದ್ಧರಾಮನು ತನ್ನ ತಂದೆ, ತಾಯಿ, ಅಣ್ಣ-ಎಲ್ಲರಿಗೂ ಶಿವದೀಕ್ಷೆಯನ್ನು ಕೊಟ್ಟು, ಊರಿನಲ್ಲಿ ಶಿವಾಲಯಗಳನ್ನು ಕಟ್ಟಿಸಿ, ಶ್ರೀ ಮಲ್ಲಿಕಾರ್ಜುನನನ್ನು ಪ್ರತಿಷ್ಠೆ ಮಾಡಿ, ಕೆರೆ-ಕಟ್ಟೆಗಳನ್ನು ಕಟ್ಟಿಸಿ ತುಂಬಾ ಪವಾಡಗಳನ್ನು ಮೆರೆದನು. ಸಿದ್ಧರಾಮನ ಮಹಾತ್ಮ್ಯವನ್ನು ಕೇಳಿ ನಾನಾ ದೇಶಗಳಿಂದ ಜನರು ಸೊನ್ನಲಿಗೆಗೆ ಬಂದು ತಮ್ಮ ರೋಗಾದಿ ಉಪದ್ರವಗಳನ್ನು ಕಳೆದುಕೊಳ್ಳುತ್ತಿದ್ದರು. ಅಲ್ಲಮಪ್ರಭುಗಳೂ ಸಿದ್ಧರಾಮನಲ್ಲಿಗೆ ಬಂದು ಅವನನ್ನು ಕೆಣಕಿ, ಹೀನೈಸಿ ಮಾತನಾಡತೊಡಗಿದರು. ಆದರೆ ಸಿದ್ಧರಾಮನು ಅವನಿಗೆ ಬಾಗಲಿಲ್ಲ. ತಾನೇ ಪರಬೊಮ್ಮನೆಂದು ಸಮಾಧಾನ ಮಾಡಿ, ತನ್ನ ಕೆಲಸಕಾರ್ಯಗಳಲ್ಲಿಯೇ ಮಗ್ನನಾದನು. ಸಿದ್ಧರಾಮನು ಶಿವಾಲಯ ಕಟ್ಟಿಸುವುದು, ಕೆರೆಕಟ್ಟೆ ಮಾಡಿಸುವುದು ಇತ್ಯಾದಿಗಳನ್ನು ಕಂಡ ಅಲ್ಲಮನು ಸಿದ್ಧರಾಮನನ್ನು 'ಒಡ್ಡ' (ಕಲ್ಲು ಕೆಲಸದವ)ನೆಂದು ನಿಂದಿಸಿದನು. ಆದರೆ ಸಿದ್ಧರಾಮನು ಇದನ್ನು ಪರಿಗಣಿಸದೇ ತನ್ನ ಕಾರ್ಯಗಳನ್ನು ಮುಂದುವರಿಸಿದನು. ಅಲ್ಲಮನು ಸಂತೋಷದಿಂದ ಅಲ್ಲಿಂದ ಹೊರಟು ಕದಳಿಕಾವನದ ಕಡೆಗೆ ಹೊರಟು ಹೋದನು, ಇದಾದ ಕೆಲವು ಸಮಯದ ನಂತರ ಸಿದ್ಧರಾಮನು ಹಾವಿನಹಾಳ, ಕಲ್ಲಯ್ಯ ಮುಂತಾದ ಗುಡ್ಡರನ್ನು ಕರೆದು ಉಪದೇಶ ಮಾಡಿ ತಾನೇ ಕೆರೆಯ ಮಧ್ಯದಲ್ಲಿ ಕಟ್ಟಿಸಿದ್ದ ಮಂದಿರದಲ್ಲಿ ಸೇರಿ ಬಯಲಾದನು,

ಸಂಪೂರ್ಣ ವಾರ್ಧಿಕ ಷಟ್ಪದಿಯಲ್ಲಿಯೇ ರಚಿಸಲ್ಪಟ್ಟಿದ್ದ ಈ ಗ್ರಂಥವು ಅತ್ಯಂತ ಉತ್ಕೃಷ್ಟವಾಗಿದೆ. ವರ್ಣನೆ ಇತ್ಯಾದಿಗಳೆಲ್ಲವೂ ಶ್ರೇಷ್ಠ ಮಟ್ಟದವಾಗಿವೆ.


(ಮುಂದುವರಿಯುವುದು)

## ಶ್ರೀಮತಿ ಉಷಾರಾಣಿ



ವಿರಾಜಪೇಟೆ ತಾಲೂಕಿನ ತೋಮರದ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ಉಷಾರಾಣಿಯವರು 2014ನೇ ಸಾಲಿನಲ್ಲಿ ನಡೆದ ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಬಿ.ಎಡ್.(B.Ed) ಪದವಿಯಲ್ಲಿ 4ನೇ ರ್‍ಯಾಂಕ್ ಗಳಿಸಿರುತ್ತಾರೆ. ಕೊಡಗಿನ ವಿರಾಜಪೇಟೆಯ ಹಿಂದೂ ಪತ್ರಿಕೆಯ ಏಜಂಟ್ ಪೇರೂರು ಶುಭಕರ್‌ರಾವ್‌ರವರ ಧರ್ಮಪತ್ನಿಯಾಗಿರುವ ಶ್ರೀಮತಿ ಉಷಾರಾಣಿ ಶ್ರೀ ಕ್ಯೊಲ ಶ್ರೀಧರರಾವ್ ಮತ್ತು ಶ್ರೀಮತಿ ಸುಭದ್ರಾ ದಂಪತಿಗಳ ಪುತ್ರಿ . ಶ್ರೀಮತಿ ಉಷಾರಾಣಿಯವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಬಾಲಚಂದ್ರ ರಾವ್



ಉಡುಪಿಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಉದ್ಯೋಗದಲ್ಲಿರುವ ಶ್ರೀ ಬಾಲಚಂದ್ರರಾವ್ (ಎಲ್ಲೂರು ದಿ.। ಕೆ.ಲಕ್ಷ್ಮೀನಾರಾಯಣರಾವ್ ಮತ್ತು ಜಲಜಾಕ್ಷಿ ದಂಪತಿಗಳ ಪುತ್ರ) 2014-15ನೇ ಸಾಲಿನಲ್ಲಿ ಚೆನ್ನೈನ ನೇಶನಲ್ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ (ಹೆಚ್ ಆರ್ ಎಮ್) ನಡೆಸಿದ ಎಂ ಬಿ ಎ ಪರೀಕ್ಷೆಯಲ್ಲಿ 620/800 (78%) ಅಂಕಗಳಿಸಿ ದಕ್ಷಿಣ ವಲಯದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಶ್ರೀಯುತರು 2013-14ನೇ ಸಾಲಿನಲ್ಲಿ ಬಿ ಟೆಕ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದನ್ನು 2014ರ ಜೂನ್ ತಿಂಗಳ ಶ್ರೀ ಶಾರದಾ ಪತ್ರಿಕೆಯಲ್ಲಿ ಪ್ರಕಟಿಸಿದ್ದನ್ನು ಸ್ಮರಿಸಿಕೊಳ್ಳಬಹುದು. ಬಾಲಚಂದ್ರರಾಯರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಶ್ರೀ ಅಶೋಕ ರಾವ್



ಕಟಪಾಡಿ ಮೂಡಬೆಟ್ಟು ಶ್ರೀ ಅಶೋಕ ರಾವ್ ಅವರು ಕಟಪಾಡಿ ಸಿ ಎ ಬ್ಯಾಂಕಿನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಬ್ಯಾಂಕಿನ ನಿರ್ದೇಶಕರಾಗಿ ಚುನಾಯಿತರಾಗಿದ್ದಾರೆ. ಕಟಪಾಡಿ ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷರಾಗಿರುವ ಇವರು ಕಟಪಾಡಿ ಹಾಲು ಉತ್ಪಾದಕರ ಸಹಕಾರಿ ಸಂಘ (ನಿ) ಇದರ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಕಟಪಾಡಿಯಲ್ಲಿ ಸಸ್ಯಾಹಾರಿ ರಾವ್ ಕೆಟರರ್ಸ್ ಮತ್ತು ರಾವ್ ಟೂರ್ಸ್ ಟ್ರಾವೆಲ್ಸ್& ಲ್ಯಾಂಡ್ ಲಿಂಕ್ಸ್ ಸಂಸ್ಥೆಗಳನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವ ಇವರು ಕಟಪಾಡಿಯ ದಿ।ರಾಮಕೃಷ್ಣರಾವ್ ಮತ್ತು ಗಿರಿಜಮ್ಮ ದಂಪತಿಗಳ ಪುತ್ರ. ಶ್ರೀ ಅಶೋಕ್ ರಾವ್ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಬ್ರಹ್ಮೋಪದೇಶ

**ಚಿ। ಅಕ್ಷಯ**

ಎಲ್ಲೂರು ಶ್ರೀಮತಿ ಸುನೀತ ಮತ್ತು ಶ್ರೀ ಪ್ರಸಾದ ಕುಮಾರರ ಪುತ್ರ ಚಿ। ಅಕ್ಷಯನ ಬ್ರಹ್ಮೋಪದೇಶವು ದಿನಾಂಕ 12-03-2015 ರಂದು ಉಡುಪಿ ಚಿಟ್ಪಾಡಿಯ ಶ್ರೀ ಶಾರದಾಂಬಾ ದೇವಸ್ಥಾನದ ಸಭಾ ಭವನದಲ್ಲಿ ಜರಗಿತು.

## ಮೀನ ಮಾಸದ ವಿಶೇಷ ದಿನಗಳು

| | |
|---|---|
| 14-03-2015 | ಮೀನ ಸಂಕ್ರಮಣ, |
| 16-03-2015 | ಸರ್ವೈಕಾದಶೀ |
| 18-03-2015 | ಪ್ರದೋಷಃ, ಉತ್ತರಾಭಾದ್ರಾ ನಕ್ಷತ್ರಾರಂಭ |
| 20-03-2015 | ಅಮವಾಸ್ಯಾ, |
| 21-03-2015 | ಚಾಂದ್ರ ಯುಗಾದಿ |
| 30-03-2015 | ಸರ್ವೈಕಾದಶೀ, |
| 31-03-2015 | ರೇವತೀ ನಕ್ಷತ್ರಾರಂಭ |
| 01-04-2015 | ಪ್ರದೋಷಃ |
| 04-04-2015 | ಪೂರ್ಣಿಮಾ, |
| 08-04-2015 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-10.03ಕ್ಕೆ |
| 14-04-2015 | ಮೇಷ ಸಂಕ್ರಮಣ, ಅಶ್ವಿನೀ ನಕ್ಷತ್ರಾರಂಭ |

## ಮಾಂಗಲ್ಯಂ ತಂತುನಾನೇನ ....

ಅದ್ಯಪಾಡಿ ಶ್ರೀಮತಿ ಉಷಾ ಮತ್ತು ಶ್ರೀ ಎ ಮೋಹನ್ ದೇವ ಇವರ ಪುತ್ರ **ಅಮಿತ್** ಹಾಗೂ ಪಾಂಡವಪುರ ಶ್ರೀಮತಿ ವೀಣಾ ಮತ್ತು ಶ್ರೀ ಪಶುಪತಿ ಶರ್ಮಾ ಇವರ ಪುತ್ರಿ **ಯಶಸ್ವಿನೀ** ಇವರ ವಿವಾಹವು ದಿನಾಂಕ 8-3-2015 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಹೆರ್ಮುಂಜೆ ಶ್ರೀಮತಿ ಲಲಿತಾ ಮತ್ತು ಶ್ರೀ ವಸಂತ ಭಾಗವತರ ಪುತ್ರ **ಅಶ್ವತ್** ಹಾಗೂ ಎಲ್ಲೂರು ಶ್ರೀಮತಿ ದೀಪಾಲಿ ಮತ್ತು ಶ್ರೀ ವೈ. ರತ್ನಾಕರ ರಾವ್ ಅವರ ಪುತ್ರಿ **ಅವಂತಿ** ಇವರ ವಿವಾಹವು ದಿನಾಂಕ 4-3-2015ರಂದು ಉಡುಪಿ ಕುಂಜಿಬೆಟ್ಟಿನ ಶಾರದಾ ಮಂಟಪದಲ್ಲಿ ಜರುಗಿತು.

## ಶುಭ ಜನನ

ಸಿಂಗಾಪುರದಲ್ಲಿರುವ ಎಲ್ಲೂರಿನ ಶ್ರೀ ಶಿವಪ್ರಸಾದ್ ರಾವ್ ಹಾಗೂ ಶ್ರೀಮತಿ ಶುಭ ಯಸ್. ರಾವ್ ದಂಪತಿಗಳಿಗೆ ದಿನಾಂಕ 20-02-2015 ರಂದು ಹೆಣ್ಣು ಶಿಶುವಿನ (ಅವನಿರಾವ್) ಶುಭ ಜನನ.

## ವಿಳಾಸ ಬದಲಾವಣೆ

**SATEESH KUMAR**
Building No 9. Flate No 2 ,
Samarth Nagar, Tenants C H S Ltd
Chunabatti (E), Sion Mumbai-400022

★★★ ★★★

**UMESH RAO YERMAL**
10/41, 5th Main, E & F Block,
Ramakrishna Nagar, Mysore-570022

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.06-04-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.24-03-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.11-04-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

ಕವನ

## ಎಲ್ಲಿದೆ ನನ್ಮನೆ

ಅದು ಮೂಲ ಮನೆ
ಹೆಸರಿಗಂಟಿದೆ ಆ ಮನೆ।
ಹಿರಿ-ಕಿರಿಯರು ಆಳಿದ ಮನೆ-
ಬಾಳ ಬದುಕಿನ ವೈಭವದ ಮನೆ ॥೧॥

ಇದು ವೈದ್ಯ ಪರಂಪರೆಯ ಮನೆ-
ಬಡವರ ಸಂಜೀವಿನಿ ಈ ಮನೆ
ಅದೇಕೋ ದೈವ ಮುನಿದ ಮನೆ?
ನಮ್ಮ ಕೊಂಡಿ ಕಳಚಿದ ಮನೆ ॥೨॥

ಬಾಳನರಸಿ ನಿಂತ ಮನೆ-
ಕರಿಕಲ್ಲ ಜೋಗುಳ ಮನೆ।
ಬಾಳು ರೂಪಿಸಿದ ಮನೆ-
ಬಾಳ ಗೆಳತಿ ಬಂದ ಮನೆ ॥೩॥

ಸಂಸಾರ ಬೆಳೆದ ಮನೆ
ಅದೇ "ಗೋಮಾಂತಕ" ಮನೆ।
ಮುಂದೆ ಹಲವು ಮನೆ-
ಜೀವ ನಲಿದ ಮನೆ ॥೪॥

ಬೆಳ್ಳಿ ಹಟ್ಟಿದ ಹಳ್ಳಿ ಮನೆ-
ಶಿಕಾರಿಪುರದ ಸಾರ್ಥಕ ಮನೆ।
ಸಕಲೇಶಪುರದ ಸ್ವಂತ ಮನೆ-
ಮಾರಾಟವಾಯ್ತು ಆ ಮನೆ ॥೫॥

ಮೂಡಿಗೆರೆಯ ಮಲ್ನಾಡ ಮನೆ-
ಮುಂಗಳಾಂಬೆಯ ಮಡಿಲ ಮನೆ।
ತಾಜಮಹಲಿನ ಸುಂದರ ಮನೆ-
ರಾಜಧಾನಿಯ ಪಕ್ಕದ ಮನೆ ॥೬॥

ಕಾರವಾರದ ಕಡಲಿನ ಮನೆ-
ಹಿತಗಾಳಿಯ ಒಡಲಿನ ಮನೆ।
ಹಾಸನಾಂಬೆಯ ಮಡಿಲಿನ ಮನೆ-
ನೆಮ್ಮದಿ ಪಡೆದ ಆ ಮನೆ ॥೭॥

ನನ್ನವಳ ಕನಸು ನನಸಾದ ಮನೆ-
ಅದು 'ಕುಕ್ಕೆ' ಪಕ್ಕದ ಭವ್ಯ ಮನೆ।
ಮಗಳ ಕಂಕಣ ಭಾಗ್ಯದ ಮನೆ-
ಮಗನ ಬಾಳು ಬೆಳಗಿದ ಮನೆ॥೮॥

ಸಂಬಂಧಗಳ ಕೊಂಡಿ ಬೆಸೆದ ಮನೆ-
ಧಾರ್ಮಿಕ ಕಾರ್ಯಗಳ ಆಸರೆ ಈ ಮನೆ।
ಸಮಾಜ ಚಟುವಟಿಕೆಯ ತಾಣ ಆ ಮನೆ-
ಬಂಧು - ಬಾಂಧವರು ಮೆಚ್ಚಿದ ಮನೆ ॥೯॥

ಶಾಂತಿ ಅರಸಿ ಕಟ್ಟಿದ ಮನೆ-
ಶುಭ-ಶೋಭನಾದಿ ನಡೆದ ಮನೆ।
ಭೀಮರಥ ಶಾಂತಿ ಆಚರಿಸಿದ ಮನೆ-
ಬದಲು ಸಾರಥ್ಯ ಚಿಂತಿಸಿದ ಮನೆ ॥೧೦॥

ಇಂದು, ಅದು ಮಗನ ಮನೆ-
ನಾನು ನಡೆದ ಮಗಳ ಮನೆ।
ಇಲ್ಲಿದೆ ಪೊಡವಿಗೊಡೆಯನ ಮನೆ-
ಮನಃ ಶಾಂತಿ ದೊರೆತ ಮನೆ ॥೧೧॥

ಅದೋ ಕರೆಯುತಿದೆ "ಗುಡ್ಡೆ ಮನೆ"-
ಅದು ಚಿರಶಾಂತಿ ಮನೆ।
ಇಲ್ಲಿರುವುದು ಸುಮ್ಮನೆ-
ಅಲ್ಲಿರುವುದು ನನ್ಮನೆ! ॥೧೨॥

**-ಜಿ.ಕೆ. ಕೊಲ್ಪೆ (ಉಡುಪಿ)**

## ಯೌವನ

ಯೌವನ ಎಂದರೆ
ಹುಡುಗಿಯರಿಗೆ
ನೆಲ ಕಾಣದು।
ಹುಡುಗರಿಗೆ
ನೆಲೆ ಸಿಕ್ಕದ
ದಾರಿ ಕಾಣದ ಪಯಣ॥
ಯೌವನ ಎಂದರೆ
ಹುಡುಗಿಯರಿಗೆ
ರೆಕ್ಕೆ ಬಲಿತ ಹಕ್ಕಿಯಂತೆ।
ಹುಡುಗರಿಗೆ
ಬಂಧನದಿಂದ
ಹೊರಬಂದ ಗೂಳಿಯಂತೆ॥
ಯೌವನ ಎಂದರೆ
ಹುಡುಗಿಯರಿಗೆ
ಎಚ್ಚರಿಕೆಯ ದರ್ಪಣ।
ಹುಡುಗರಿಗೆ
ಒಳಿತು ಕೆಡುಕುಗಳ
ಹುಡುಕುವ ನಯನ॥
ಯೌವನ ಎಂದರೆ
ಹುಡುಗಿಯರಿಗೆ
ಸಿಡಿಲಿನ ನಡುವಿನ ಮಿಂಚು।
ಹುಡುಗರಿಗೆ
ಕಡಲಿನ ತೀರಕೆ
ಬಡಿಯುವ ಅಲೆಯು ॥

-ಕೆ. ಗೋಪಾಲ್‌ರಾವ್ . ಕಡಬ.

# ಸ್ಥಾನಿಕ ಬ್ರಾಹ್ಮಣ ಸಭಾ (ರಿ)

ರಿ. ನಂ. 287/95, (ಶಿವ ಬ್ರಾಹ್ಮಣ ಸಭಾ)
ಡೋರ್ ನಂ. 24/535, ಬ್ಯಾಂಕ್ ರೋಡ್ ಕಾಸರಗೋಡು, ಕೇರಳ

**ಪ್ರಕಟಣೆ**

ಕಾಸರಗೋಡಿನಲ್ಲಿ ಶಿವಬ್ರಾಹ್ಮಣ/ಸ್ಥಾನಿಕ ಬ್ರಾಹಣರ ಸಂಘಟನೆಯಿದ್ದು, ಅದು ಸ್ಥಾನಿಕ ಬ್ರಾಹ್ಮಣ ಸಭಾ/ ಶಿವ ಬ್ರಾಹಣ ಸಭಾ ಎಂಬ ಹೆಸರುಗಳಂದ ಕರೆಯಲ್ಪಡುತ್ತಿದೆ. ಆದರೆ ಇತ್ತೀಚೆಗೆ ನಮ್ಮ ಸಮಾಜಕ್ಕೆ ಸೇರಿದ ಕೆಲವು ವ್ಯಕ್ತಿಗಳು ಶಿವ ಬ್ರಾಹ್ಮಣ ಸಂಘ ಎಂಬ ಹೆಸರಿನಿಂದ ಹೊಸ ಸಂಘ ಸ್ಥಾಪಿಸಿರುವುದು ನಮ್ಮ ಗಮನಕ್ಕೆ ಬಂದಿದೆ. ನಮ್ಮಲ್ಲಿಯ ಶಿವ ಬ್ರಾಹ್ಮಣರಿಗೂ ಈ ಸಂಘದ ಸದಸ್ಯರಿಗೂ ಯಾವುದೇ ರೀತಿಯ ಸಂಬಂಧವೂ ಇಲ್ಲ. ಅವರು ಯಾರೂ ಅಖಿಲ ಭಾರತ ಸ್ಥಾನಿಕ ಮಹಾ ಮಂಡಲದ ಸದಸ್ಯರಲ್ಲ. ನಮ್ಮ ವರ್ಗಕ್ಕೆ ಅವರು ಸೇರಿದವರಲ್ಲ. ಸಮಾಜ ಬಾಂಧವರಲ್ಲಿ ತಪ್ಪಭಿಪ್ರಾಯ ಬರಬಾರದೆಂದು ಈ ಪ್ರಕಟಣೆಯನ್ನು ಕೊಟ್ಟಿರುತ್ತೇವೆ. ಈ ವಿಚಾರದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದರೆ ಈ ಕೆಳಗಿನವರನ್ನು ಸಂಪರ್ಕಿಸಬಹುದು.

1) ಡಾ। ಎಂ ಸತ್ಯನಾಥ–09447347170 2) ಶುಭಕರ ಶ್ಯಾನುಭೋಗ್–09895810729
3) ಮನೋಹರ ಎ.–09495180294 – **ಅಧ್ಯಕ್ಷರು.**

# ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ

ಶಿವರಾತ್ರಿಯ ಪರ್ವಕಾಲದಲ್ಲಿ ಶಿವನ ಆರಾಧನೆ, ಶಿವಲಿಂಗ ಪೂಜೆ, ಶಿವರಾತ್ರಿ ಜಾಗರಣೆಯಿಂದ ಪರಮೇಶ್ವರನು ಸಂತೃಪ್ತನಾಗಿ ಸರ್ವರಿಗೂ ಸುಖ-ಶಾಂತಿ, ನೆಮ್ಮದಿ ಕರುಣಿಸುವನು ಎಂಬುದಾಗಿ ಪ್ರತೀತಿ ಇದೆ. ಅದರಂತೆ ಪ್ರತೀ ವರ್ಷವೂ ಶಿವಭಕ್ತರಾದ ನಾವು ಶಿವರಾತ್ರಿಯಂದು ರುದ್ರಪಠಣ, ರುದ್ರಾಭಿಷೇಕ, ಭಜನೆ ಹಾಗೂ ವಿಶೇಷ ಪೂಜೆಯನ್ನು ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು ಇದರ ವತಿಯಿಂದ ನಡೆಸಿಕೊಂಡು ಬರುತ್ತಿದ್ದೇವೆ.

ತಾ.17-02-2015ನೇ ಮಂಗಳವಾರ ಉಡುಪಿ ಕುಂಜಿಬೆಟ್ಟಿನ ಶಾರದಾ ದೇವಸ್ಥಾನದಲ್ಲಿ ಸಮಾಜ ಬಾಂಧವರ ಸಹಕಾರದಿಂದ ಶಿವರಾತ್ರಿ ಉತ್ಸವವು ನೆರವೇರಿತು. ಆ ಪ್ರಯುಕ್ತ ಬ್ರಹ್ಮಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಬೆಳಿಗ್ಗೆಯಿಂದ ರುದ್ರಾಭಿಷೇಕ, ಪಾರಾಯಣ, ಆರಾಧನೆ ಮಹಿಳಾ ವೇದಿಕೆಯವರಿಂದ ಶಿವ ಸ್ತೋತ್ರ ಪಠಣ, ಶಿವಸಹಸ್ರನಾಮಾವಳಿ ಹಾಗೂ ಸ್ವಾಧ್ಯಾಯ ಸಮಿತಿಯವರಿಂದ ರುದ್ರ ಪಠಣ ಜರುಗಿತು. ಮಧ್ಯಾಹ್ನ 12 ಗಂಟೆಗೆ ಬ್ರಹ್ಮಶ್ರೀ ವಾಸುದೇವ ಉಪಾಧ್ಯಾಯರು ದೇವಸ್ಥಾನದ ಅರ್ಚಕರ ಸಹಕಾರದಿಂದ ಮಹಾಪೂಜೆಯನ್ನು ನೆರವೇರಿಸಿದರು. ಸಂಘದ ಪದಾಧಿಕಾರಿಗಳು, ಸದಸ್ಯರು, ಸಮಾಜ ಬಾಂಧವರು ಅಲ್ಲದೆ ಸುತ್ತಲಿನ ಭಕ್ತಜನರು ಈ ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ಅಂದು ಪಾಲ್ಗೊಂಡ ಭಕ್ತ ಬಾಂಧವರಿಗೆ ಹಾಗೂ ಸಹಕರಿಸಿದ ಸಮಾಜ ಬಾಂಧವರಿಗೆ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಕೃತಜ್ಞತೆಯನ್ನು ಅರ್ಪಿಸುತ್ತದೆ.

॥ಶ್ರೀ ಗುರುಭ್ಯೋನಮಃ॥

ಸಮಾಜ ಬಾಂಧವರೇ,

ಇದೇ ಬರುವ ದಿ. 12–04–2015ನೇ ಆದಿತ್ಯವಾರದಿಂದ 19–04–2015ರವರೆಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ, ಹೆಜಮಾಡಿ ಕೃಷ್ಣರಾಜಭಟ್ ಇವರ ನೇತೃತ್ವದಲ್ಲಿ ಸ್ಥಾನಿಕ ಸಭಾ (ರಿ.) ಪಡುಬಿದ್ರೆ ಇದರ ಉಸ್ತುವಾರಿಯಲ್ಲಿ

# ಸಂಸ್ಕೃತ ವೇದಪಾಠಶಾಲೆ ಮತ್ತು ವೈದಿಕ ಶಿಬಿರವು

ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆಯಲಿರುವುದು. ಇದರ ಪ್ರಾಯೋಜಕತ್ವವನ್ನು ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.) ಕುಕ್ಕಿಕಟ್ಟೆ ಉಡುಪಿ., ಎಬಿಸಿಡಿ&ಇ ಟ್ರಸ್ಟ್ (ರಿ.) ಇನ್ನ ಸಾಲ್ದಾನಾ ಹೆರಿಟೇಜ್, ಇನ್ನ ಮತ್ತು ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರೆ ಇವರು ವಹಿಸಿಕೊಳ್ಳಲಿದ್ದಾರೆ. ಇದಲ್ಲದೆ ಸಮಾಜ ಬಾಂಧವರ ಸಹಕಾರವನ್ನೂ ಬಯಸುತ್ತದೆ. ಇದನ್ನು ಸಾಕಾರಗೊಳಿಸಲು ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ವಟುಗಳನ್ನು ಕಳುಹಿಸಿಕೊಡಬೇಕಾಗಿ ವಿನಂತಿ.

**(7ದಿನವೂ ವಟುಗಳಿಗೆ ಊಟೋಪಚಾರ ಹಾಗೂ ತಂಗುವ ವ್ಯವಸ್ಥೆ ಇದೆ.)**

**ಸಂಪರ್ಕಿಸಬೇಕಾದ ದೂರವಾಣಿ**

ಡಾ। ವೈ. ಸುದರ್ಶನ್ ರಾವ್, ಕುಕ್ಕಿಕಟ್ಟೆ, ಉಡುಪಿ–9845136322, ಶ್ರೀ ಗಣೇಶ್ ಭಟ್, ಅರ್ಚಕರು, ಪಾದೆಬೆಟ್ಟು, 9449905918, ಶ್ರೀ ಕೃಷ್ಣರಾಜ ಭಟ್, ಅರ್ಚಕರು. ಹೆಜಮಾಡಿ–9980195355, ಐ. ಲಕ್ಷ್ಮೀಕಾಂತ ರಾವ್, 'ಇನ್ನ ಸಾಲ್ದಾನಾ ಹೆರಿಟೇಜ್'–9448156413, ಸುಧಾಕರ್ ಬೆಳ್ಳೆ, ಕಾರ್ಯದರ್ಶಿ, ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರೆ–9845193103

# ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)

ಕುಕ್ಕಿಕಟ್ಟೆ ಉಡುಪಿ.,

ಸಮಾಜ ಬಾಂಧವರೇ,

ವಯೋಮಿತಿಯ ನಿರ್ಬಂಧವಿಲ್ಲದೆ ತಮ್ಮ ಬಿಡುವಿನ ವೇಳೆಯಲ್ಲಿ ವೈದಿಕ ಉಡುಗೆ ತೊಡುಗೆ, ಭಸ್ಮ ಧಾರಣೆ, ಜಪ, ಪೂಜಾವಿಧಿ ಇತ್ಯಾದಿಗಳನ್ನು ಕಲಿಯಬಯಸಿದಲ್ಲಿ ವರ್ಷವಿಡೀ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಶ್ರೀ ಕೃಷ್ಣರಾಜಭಟ್ ಹಾಗೂ ಶ್ರೀ ಗಣೇಶ್ ಭಟ್ ಇವರ ನೇತೃತ್ವದಲ್ಲಿ ಕಲಿಸಿಕೊಡಲಾಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ಸಂಸ್ಥೆಯು ಆಶಿಸುತ್ತದೆ.

ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ :

ಡಾ। ವೈ. ಸುದರ್ಶನ್ ರಾವ್, ನಿರ್ದೇಶಕರು, ಕುಕ್ಕಿಕಟ್ಟೆ, ಉಡುಪಿ–9845136322, ಶ್ರೀ ಗಣೇಶ್ ಭಟ್, ಅರ್ಚಕರು, ಪಾದೆಬೆಟ್ಟು, 9449905918, ಶ್ರೀ ಕೃಷ್ಣರಾಜ ಭಟ್, ಅರ್ಚಕರು. ಹೆಜಮಾಡಿ–9980195355


## ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧಿ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010
ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

**ಮೊಬೈಲ್– 9886629697, 9986119865**

ಪ್ರೊ : ಸುಧಾಕರ್ ರಾವ್ ಬೆಳ್ಳೆ



## ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್ Cell : 9845644556, 9483913344



## ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ

ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan YOUR GUIDE TO THE FINANCIAL JUNGLE

Visit : www.sharekhan.com